ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

# ತಪೋವಾಣಿ

ಸಂ. 8 ಸಂ. 4 ಏಪ್ರಿಲ್ 2011 ರೂ.15

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
★ ಪ್ರೀತಿ ನಮ್ಮ ಸ್ವಭಾವ.
★ ಮೌನ ನಮ್ಮ ಭಾಷೆ.
★ ಧ್ಯಾನ ನಮ್ಮ ಮಾರ್ಗ.
★ ಈ ಪ್ರಪಂಚ ನಮ್ಮ ಆಶ್ರಮ.
★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

## ಅನಿಸಿಕೆಗಳು

ಗುರೂಜಿ ಕೃಷ್ಣಾನಂದ

(ಅನು: ಶ್ಯಾಮಲಾದೇವಿ)

ಜಪಾನಿಗೆ ಅಪ್ಪಳಿಸಿರುವ ದುರಂತದಿಂದ ಪ್ರತಿಯೊಬ್ಬರೂ ಆಘಾತಗೊಂಡಿದ್ದಾರೆ. ಈ ಸಂದರ್ಭದಲ್ಲಿ ಅನೇಕ ಪ್ರಶ್ನೆಗಳು ಮೂಡುತ್ತವೆ ಮತ್ತು ಉತ್ತರಗಳಿಲ್ಲದೆ ನಮ್ಮ ಮಾನಸಿಕ ಪಟಲದ ಮೇಲೆ ಹಾಗೆಯೇ ಉಳಿಯುತ್ತವೆ. ಈ ಸಮಯದಲ್ಲಿ ಹೇಗೆ ಸಹಾಯ ಮಾಡಬಹುದು ಎಂಬುದನ್ನು ತಿಳಿದುಕೊಳ್ಳಲು ಪ್ರತಿಯೊಬ್ಬರೂ ಒದ್ದಾಡುತ್ತಿದ್ದಾರೆ. ವೈಯಕ್ತಿಕವಾಗಿ ಸಹಾಯ ಮಾಡಬಹುದಾದ ಅತ್ಯುತ್ತಮ ರೀತಿಯೆಂದರೆ ಬೆಳಕನ್ನು ಕಳುಹಿಸುವುದು. ಬೆಳಕಿಗೆ ಚೈತನ್ಯವಿದೆ. ಅದು ಒಂದು ಬಲವಾದ ಚೈತನ್ಯ ವಲಯವನ್ನು ಸೃಷ್ಟಿಸುತ್ತದೆ. ಈ ವಲಯ ಸಹಾಯ ಮಾಡಬಲ್ಲವರಿಂದ ಸಹಾಯವನ್ನು ಆಕರ್ಷಿಸುತ್ತದೆ. ಬೆಳಕು ದುರಂತಕ್ಕೀಡಾಗಿರುವ ವ್ಯಕ್ತಿಗಳನ್ನು ತಲುಪುತ್ತದೆ ಮತ್ತು ಅವರಲ್ಲಿ ಧೈರ್ಯ ಮತ್ತು ಭರವಸೆಗಳನ್ನು ತುಂಬುತ್ತದೆ. ಪ್ರಪಂಚದ ಯಾವುದೇ ಭಾಗದಲ್ಲಿ ಯಾವುದೇ ದುರಂತವಾದರೂ, ಇದೇ ವಾಸ್ತವ ಸತ್ಯ. ಇದು ಲಿಬಿಯಾಕ್ಕೂ ಅನ್ವಯಿಸುತ್ತದೆ. ಬೆಳಕು ಜನರನ್ನು ತಲುಪಿ ಅವರಿಗೆ ಸಹಾಯ ಮಾಡುತ್ತದೆ. ಬೆಳಕನ್ನು ಚಾನಲ್ ಮಾಡುವುದು ಎಲ್ಲ ಕಾಲದಲ್ಲೂ ಬಹಳ ಪ್ರಯೋಜನಕಾರಿ.

ಪ್ರಕೃತಿ, ಭೂಮಿ ಮತ್ತು ಮೇಲೆ, ಬುದ್ಧಿಶಕ್ತಿಗಳಿವೆ. ನಮಗೆ ಗೊತ್ತಿಲ್ಲದ ಆಧ್ಯಾತ್ಮಿಕ ನಿಯಮಗಳಿವೆ. ನಮ್ಮ ಜೀವನವನ್ನು ಮೇಲ್ವಿಚಾರಣೆ ಮಾಡುವ ದೇವರುಗಳಿದ್ದಾರೆ. ನಾವು ಅಪ್ರೀತಿಯನ್ನು ವ್ಯಕ್ತಪಡಿಸಿದಾಗ, ಅದರ ಪರಿಣಾಮವನ್ನು ಎದುರಿಸಬೇಕು. ಕೆಲವುಬಾರಿ ಅವು ಅನರ್ಥಗಳಾಗಿ ಪರಿಣಮಿಸುತ್ತವೆ. ದೇವರುಗಳು ಇವನ್ನು ತಪ್ಪಿಸಲಾಗುವುದಿಲ್ಲ. ಬುದ್ಧಿಶಕ್ತಿಗಳು ಇವನ್ನು ತಪ್ಪಿಸಲಾಗುವುದಿಲ್ಲ. ನಾವು, ಈ ಭೂಮಿಯ ಜನರು, ಮಾತ್ರ ಇವನ್ನು ತಪ್ಪಿಸಬಹುದು. ನಾವು ಅಪ್ರೀತಿಯನ್ನು ವ್ಯಕ್ತಪಡಿಸುವುದನ್ನು ನಿಲ್ಲಿಸಬೇಕು ಮತ್ತು ಪ್ರೀತಿಯನ್ನು ವ್ಯಕ್ತಪಡಿಸುವುದನ್ನು ಪ್ರಾರಂಭಿಸಬೇಕು. ನಕಾರಾತ್ಮಕತೆಗಳು ದುರಂತಗಳನ್ನು ತರುತ್ತವೆ. ನಾವು ಹಿಂಸೆ ಮತ್ತು ದುರಾಸೆಗಳಿಂದ ದೂರವಿರಬೇಕು. ಎಲ್ಲ ಕಡೆ ಸಾಮರಸ್ಯವಿರಬೇಕು. ಆಗ ಅನರ್ಥಗಳು ಇರುವುದಿಲ್ಲ.

ವಿಧಿಬರಹಗಳನ್ನು ಸೃಷ್ಟಿಸುವವರು ನಾವೇ. ಯುದ್ಧಗಳು ಮತ್ತು ಸುನಾಮಿಗಳನ್ನು ಸೃಷ್ಟಿಸುವವರು ನಾವೇ. ಇದನ್ನು ನಂಬುವುದು ಕಷ್ಟ. ಹೌದು, ಆದರೆ ಇದು ಸತ್ಯ. ವೈಯಕ್ತಿಕ ಮಟ್ಟ ಮತ್ತು ಜಾಗತಿಕ ಮಟ್ಟದಲ್ಲಿ ಸುನಾಮಿಗಳನ್ನು ನಾವು ಸೃಷ್ಟಿಸುತ್ತೇವೆ. ಇದನ್ನು ನಾವು ಮನಗಂಡು, ಜವಾಬ್ದಾರಿಯುತವಾಗಿ ವರ್ತಿಸಬೇಕಾದ ಕಾಲ ಇದು. ನಾವು ಜವಾಬ್ದಾರಿಯುತವಾಗಿ ವರ್ತಿಸದಿದ್ದರೆ, ದುರಂತಗಳಲ್ಲಿ ನೇರವಾಗಿ ತುತ್ತಾದವರ ಜೊತೆ ನಾವೂ ನೋವು ಅನುಭವಿಸಬೇಕಾಗುತ್ತದೆ. ಒಂದಲ್ಲ ಒಂದು ರೀತಿಯಲ್ಲಿ ನಾವು ನೋವು ಅನುಭವಿಸುತ್ತೇವೆ. ನಾವು ಹೊರೆಯನ್ನು ಹಂಚಿಕೊಳ್ಳುತ್ತೇವೆ. ಇದರ ಅರಿವು ನಮಗಿಲ್ಲ. ನಾವೆಲ್ಲ ಒಂದು, ಮತ್ತು ಇತರರ ನೋವು-ನಲಿವುಗಳನ್ನು ನಾವು ಹಂಚಿಕೊಳ್ಳಬೇಕು ಎಂಬುದರ ಅರಿವು ನಮಗಿಲ್ಲ. ನಾವು ಅನೇಕ ಆಧ್ಯಾತ್ಮಿಕ ಸತ್ಯಗಳನ್ನು ಮನಗಾಣಬೇಕು. ಒಮ್ಮೆ ನಾವು ನಮ್ಮ ಮನಸ್ಸುಗಳನ್ನು ತೆರೆದುಕೊಂಡರೆ, ಯಾವುದೋ ರೀತಿಯಲ್ಲಿ ಜ್ಞಾನ ನಮಗೆ ಬರುತ್ತದೆ.

ಒಬ್ಬ ಗುರುವಿನ ಕೆಲಸ, ದೈವ ಮತ್ತು ಮಾನವನ ನಡುವೆ ಒಂದು ಸೇತುವೆಯಂತೆ ಕಾರ್ಯ ನಿರ್ವಹಿಸುವುದು. ವ್ಯಕ್ತಿಗಳನ್ನು ಮುಕ್ತಿಗೆ ಮತ್ತು ಆಧ್ಯಾತ್ಮಿಕವಾಗಿ ಬದುಕಲು ಮಾರ್ಗದರ್ಶಿಸುವುದು. ಸತ್ಯಗಳನ್ನು ವಿವರಿಸುವುದು. ಆಸ್ಟ್ರಲ್ ಮಾಸ್ಟರ್‌ಗಳ ಸಂಪರ್ಕದಲ್ಲಿರುವುದು, ಅವರಿಂದ ಸೂಚನೆಗಳನ್ನು ಪಡೆದುಕೊಳ್ಳುವುದು ಮತ್ತು ಅವನ್ನು ಸಾಧಕರಿಗೆ ತಲುಪಿಸುವುದು. ಮಾನವ ಗುರುಗಳಿಗೆ ಬೇಕಾದಷ್ಟು ಕೆಲಸ ಮತ್ತು ಜವಾಬ್ದಾರಿಗಳಿವೆ. ಅವರು ತಮ್ಮ ಕೆಲಸ ಮತ್ತು ತಮ್ಮ ಮಾರ್ಗಕ್ಕೆ ಸೀಮಿತವಾಗಿರಬೇಕು.

ವಿದ್ಯಾಸಂಸ್ಥೆಗಳನ್ನು ನಡೆಸುವುದು ಅವರ ಕೆಲಸವಲ್ಲ. ರಾಜಕೀಯ ಪ್ರವೇಶಿಸುವುದು ಅವರ ಕೆಲಸವಲ್ಲ. ಅವರು ತಮ್ಮ ಕೆಲಸದಿಂದ ಹೊರಳಿದರೆ, ಅವರು ಆಧ್ಯಾತ್ಮಿಕತೆಗೆ ಅಪಸೇವೆ ಮಾಡಿದಂತೆ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಭಾರತ.
✆ (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@lightagemasters.com ವೆಬ್-ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/- ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



**12-3-2011, ಅಂತರ್-ವನದಲ್ಲಿ ಗುರೂಜಿಯವರೊಂದಿಗೆ ಅನೌಪಚಾರಿಕ ಸಭೆ.**

### ಸುದ್ದಿ-ಸೂಚನೆ

- ತಪೋನಗರದಲ್ಲಿ 2-3-2011ರಂದು ಏರ್ಪಡಿಸಿದ್ದ ಶಿವರಾತ್ರಿ ವಿಶೇಷ ಧ್ಯಾನದಲ್ಲಿ ಅನೇಕ ಧ್ಯಾನಿಗಳು ಭಾಗವಹಿಸಿದ್ದರು.
- ಎರಡು ತಿಂಗಳಿಗೊಮ್ಮೆ ಸಂಧಿಸುವ ಶಂಬಲ ಗ್ರೂಪ್, ಗುರೂಜಿಯವರಿಂದ ಮಾರ್ಗದರ್ಶನ, ದೀಕ್ಷೆ ಮತ್ತು ಅಭ್ಯಾಸಕ್ಕಾಗಿ ತಪೋನಗರದ ಉಪನ್ಯಾಸ-ಧ್ಯಾನ ಹಾಲ್‌ನಲ್ಲಿ 13-3-2011ರಂದು ಒಟ್ಟುಗೂಡಿದ್ದರು.
- 19-3-2011ರಂದು ಕಾಮದಹನ ಕಾರ್ಯಕ್ರಮಕ್ಕಾಗಿ ಸಾಯಂಕಾಲ ತಪೋನಗರ ನಿವಾಸಿಗಳೆಲ್ಲ ಸೇರಿದ್ದರು.
- ಮೂರು ಘಂಟೆ ಸಾಧನೆಯ ಬಗ್ಗೆ ಗುರೂಜಿಯವರಿಂದ ಮಾರ್ಗದರ್ಶನ ಪಡೆಯಲು ತಪೋನಗರದಲ್ಲಿ 20-3-2011ರಂದು ರಾ ಗ್ರೂಪ್ ಮೀಟಿಂಗ್ ಆಯೋಜಿಸಲಾಗಿತ್ತು.
- 6-4-2011ರಂದು ಬೆಳಿಗ್ಗೆ 11 ಘಂಟೆಗೆ ತಪೋನಗರದಲ್ಲಿ ನಮ್ಮ ಸಾಧಕರಿಗೆ ಓರಿಯಂಟೇಶನ್ ಕಾರ್ಯಕ್ರಮವನ್ನು ನಡೆಸಲಾಗುತ್ತದೆ. ದೂರಕಲಿಕೆಯ ಸಾಧಕರು ಕೂಡಾ ವೆಬ್‌ಕಾಸ್ಟ್ ಮೂಲಕ ಇದರಲ್ಲಿ ಭಾಗವಹಿಸಬಹುದು. ಆಸಕ್ತ ಸಾಧಕರು ತಮ್ಮ ಹೆಸರನ್ನು ದಿನಾಂಕ 31-3-2011ರ ಒಳಗೆ ನಮ್ಮ ಆಫೀಸಿನಲ್ಲಿ ರಿಜಿಸ್ಟರ್ ಮಾಡಬಹುದು. ಹೆಚ್ಚಿನ ವಿವರಕ್ಕಾಗಿ ನಮ್ಮ ಆಫೀಸನ್ನು ಸಂಪರ್ಕಿಸಿ.

### ಈ ತಿಂಗಳು ತಪೋನಗರದಲ್ಲಿ

| | | |
|---|---|---|
| ಭಾನುವಾರಗಳು: | | ಉಪನ್ಯಾಸಗಳು: ಬೆಳಿಗ್ಗೆ 11-12 ವಿಶೇಷ ಧ್ಯಾನ ಮತ್ತು ಲೈಟ್ ಚಾನಲಿಂಗ್: ಮಧ್ಯಾಹ್ನ 12-1 |
| 6 ಬುಧ | : | ಓರಿಯಂಟೇಶನ್ ಕಾರ್ಯಕ್ರಮ: ಬೆಳಿಗ್ಗೆ 11 – ಮಧ್ಯಾಹ್ನ 1 |
| 22 ಶುಕ್ರ | : | ಗುಡ್‌ಫ್ರೈಡೆ ವಿಶೇಷ ಧ್ಯಾನ: ಮಧ್ಯಾಹ್ನ 12-1 |

### ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

| | |
|---|---|
| 06-02-11 | ಲಲಿತಾ ಲಕ್ಷ್ಮಣನ್, ಉತ್ಕರ್ಷ ಮಾಲ್ಕರ್, ವೆಂಕಟೇಶ್ ರೆಡ್ಡಿ, ಅಜಯ್ ಕುಮಾರ್, ಅದ್ವಿತಾ ಫಡ್ನಿಸ್, ಅನುರೂಪಾ ಪ್ರಧಾನ್, ಆಶಾ ಶೇಷಾಚಲ ಮತ್ತು ಬಾಲಸುಬ್ರಮಣ್ಯಂ |
| 13-02-11 | ಪ್ರಕಾಶ್ ಉಲ್ಲಾರ |
| 20-02-11 | ಶ್ರೀವತ್ಸನ್ ಎಸ್. |
| 27-02-11 | ಶೈಲಜಾ ಮುನಿರಾಜು |

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 01 | ಶುಕ್ರ | ಮಾಸ ಶಿವರಾತ್ರಿ |
| 03 | ಭಾನು | ಅಮಾವಾಸ್ಯೆ |
| 04 | ಸೋಮ | ಚಾಂದ್ರಮಾನ ಯುಗಾದಿ |
| 11 | ಸೋಮ | ಶುಕ್ಲ ಅಷ್ಟಮಿ |
| 12 | ಮಂಗಳ | ಶ್ರೀರಾಮ ನವಮಿ |
| 14 | ಗುರು | ಸೌರಮಾನ ಯುಗಾದಿ |
| 18 | ಸೋಮ | ಪೂರ್ಣಿಮಾ |
| 22 | ಶುಕ್ರ | ಗುಡ್ ಫ್ರೈಡೆ |
| 25 | ಸೋಮ | ಕೃಷ್ಣಾಷ್ಟಮಿ |

ಈ ತಿಂಗಳ ವಾರ್ತಾಪತ್ರವನ್ನು ಪ್ರಾಯೋಜಿಸಿದವರು ಶ್ರೀಮತಿ ಅಲ್ಕಾ ಜಲನ್

ಗುರೂಜಿಯವರ ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ-ಮೇಲ್ ಮುಖಾಂತರ ಸಂಪರ್ಕಿಸಬಹುದು.

ವಾರ್ತಾಪತ್ರದ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.

## ಲೈಟ್ ಚಾನಲ್ ವಿಶ್ವಸಂಚಲನದ ಇತ್ತೀಚಿನ ಸುದ್ದಿ

- ಕಳೆದ ವರ್ಷ ನಾವು ಶಾಲೆಗಳಲ್ಲಿ ಲೈಟ್ ಚಾನಲ್ ಮಾಡುವುದನ್ನು ಆರಂಭಿಸಿದಾಗಿನಿಂದ, ನಾವು ಹೆಚ್ಚು ಹೆಚ್ಚು ಶಾಲೆಗಳಲ್ಲಿ ಲೈಟ್ ಚಾನಲ್ ಮಾಡುವ ಲಕ್ಷ್ಯವನ್ನು ಹೊಂದಿದ್ದೆವು. ನಮ್ಮ ಉತ್ಸಾಹಭರಿತ ಕಾರ್ಯಕರ್ತರ ಸಹಾಯದಿಂದ ನಾವು ದೇಶದ ಅನೇಕ ನಗರಗಳಲ್ಲಿ ಸುಮಾರು 1200 ಶಾಲೆಗಳನ್ನು ತಲುಪಿ, 16 ಲಕ್ಷಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳಿಂದ ಲೈಟ್ ಚಾನಲ್ ಮಾಡಿಸಿದ್ದೇವೆ.
- ಇದು ಒಂದು ಅದ್ಭುತ ಸಾಧನೆ, ಆದರೆ ಕೇವಲ ಒಂದು ಬಾರಿ ಲೈಟ್ ಚಾನಲ್ ಮಾಡಿದರೆ ಸಾಲದು. ಈ ವರ್ಷ, ಶಾಲೆಗಳಲ್ಲಿ ಕ್ರಮಬದ್ಧವಾಗಿ ಲೈಟ್ ಚಾನಲ್ ಮಾಡುವತ್ತ ಲಕ್ಷ್ಯಕೊಡುವುದು ನಮ್ಮ ಕೆಲಸವಾಗಿದೆ. ■

## ಲೈಟ್ ಚಾನಲಿಂಗ್ ಅನುಭವಗಳು

ಈ ದಿನ (8–2–11) ಬೆಂಗಳೂರಿನ ಶಿಕ್ಷಾ ಸಾಗರ್ ಶಾಲೆಯಲ್ಲಿ ನಡೆಸಿದ ಲೈಟ್ ಚಾನಲಿಂಗ್ ಸೆಶನ್‌ನಲ್ಲಿ ಸುತ್ತಮುತ್ತ ಭೂಮಿಯ ಮಟ್ಟದಲ್ಲಿ ಬೆಳಕು ತುಂಬಿರುವಂತೆ ನನಗೆ ಅನಿಸಿತು. ನಮ್ಮನ್ನೆಲ್ಲ ಹರಸುವಂತೆ ನಾನು ಮಾಸ್ಟರ್‌ಗಳನ್ನು ಪ್ರಾರ್ಥಿಸಿದಾಗ, ಅನೇಕ ಋಷಿಗಳು ಆಕಾಶದಲ್ಲಿ ಒಂದು ದೊಡ್ಡ ವೃತ್ತಾಕಾರದಲ್ಲಿ ನಿಂತು ಮಕ್ಕಳೆಡೆಗೆ ಬೆಳಕನ್ನು ಹರಿಸುತ್ತಿದ್ದಂತೆ ನನಗೆ ಅನಿಸಿತು. ಆ ಪ್ರಕಾಶಮಾನವಾದ ಬೆಳಕು ಎಲ್ಲ ಮಕ್ಕಳನ್ನು ಪ್ರವೇಶಿಸಿದಂತೆ ಅನಿಸಿತು.

– ಸುದೀಪ್ ಜಯರಾಮ್, ಕಾರ್ಯಕರ್ತರು

ಕಳೆದ ಒಂದೂವರೆ ವರ್ಷಗಳಿಂದ ನಾನು ನಿರುದ್ಯೋಗಿಯಾಗಿದ್ದೆ. ಶಾಲೆಗಳಲ್ಲಿ ಲೈಟ್ ಚಾನಲ್ ಮಾಡಿಸುವುದನ್ನು ಆರಂಭಿಸಿದ ನಂತರ ನನಗೆ ಒಳ್ಳೆಯ ಕೆಲಸ ಸಿಕ್ಕಿತು. ಅದಕ್ಕಾಗಿ ಬೆಳಕಿಗೆ ನನ್ನ ಕೃತಜ್ಞತೆಗಳು.

– ಮಹೇಶ್ ಕೋರೆ, ಕಾರ್ಯಕರ್ತರು

ಲೈಟ್ ಚಾನಲಿಂಗ್ ಮಾಡಿದ ನಂತರ ನಾನು ಕಣ್ಣು ತೆರೆದಾಗ, ನನಗೆ ಎಲ್ಲವೂ ಹೊಸತಾಗಿ ಕಂಡಿತು.

– ಜೆ. ಕಿಂಗ್‌ಸ್ಟನ್ ಸಿಮೊನ್, ವಿದ್ಯಾರ್ಥಿ, ಕಮಲಾವತಿ ಮೆಟ್ರಿಕ್ಯುಲೇಶನ್ ಹೈಯರ್ ಸೆಕೆಂಡರಿ ಸ್ಕೂಲ್, ಸಾಹುಪುರಂ, ತೂತುಕುಡಿ ಜಿಲ್ಲೆ

ಲೈಟ್ ಚಾನಲಿಂಗ್ ಮಾಡುವಾಗ ನನಗೆ ಆನಂದವುಂಟಾಗುತ್ತದೆ. ನನ್ನ ಮನಸ್ಸು ಮುಕ್ತವಾಗುತ್ತದೆ ಮತ್ತು ನನಗೆ ಹಾಯೆನಿಸುತ್ತದೆ. ನಮಗೆ ಓದಲು ಆಸಕ್ತಿ ಇಲ್ಲದಿದ್ದಾಗ ಲೈಟ್ ಚಾನಲ್ ಮಾಡಿದರೆ, ನಮಗೆ ವ್ಯಾಸಂಗದಲ್ಲಿ ಏಕಾಗ್ರತೆ ಉಂಟಾಗುತ್ತದೆ.

– ಡಿ.ಎಸ್.ದೊರೈ ಬಾಬು, ಸನ್‌ರೈಸ್ ಪಬ್ಲಿಕ್ ಶಾಲೆ, ಬೆಂಗಳೂರು

## ತಪೋನಗರ ಡೈರಿ

ಸೀಮಾ ಅಲ್‌ಮೇಲ್ ಸೋಮಯಾಜಿ; ಅನು: ಪಾಂಡುರಂಗ

ಫೆಬ್ರವರಿ 1ರಂದು ಲೈಟ್ ಚಾನಲ್ಸ್ ಕಾರ್ಯಕರ್ತರು ನಾಲ್ಕು ಲಕ್ಷ ವಿದ್ಯಾರ್ಥಿಗಳೊಂದಿಗೆ, ಅಮರರ ಜನ್ಮದಿನವನ್ನು 'ವಿಶ್ವಸಂಚಲನ ದಿನ'ವಾಗಿ ಆಚರಿಸಿದರು. ನಂತರದ ಭಾನುವಾರ ತಪೋನಗರದಲ್ಲಿ ಅಮರ ಜಯಂತಿಯನ್ನು ಆಚರಿಸಲಾಯಿತು. ಆ ದಿನ 'Preparing for 2012' ಮತ್ತು 'iGuruji – Vol 4' ಎಂಬ ಎರಡು ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಅಂದು ಸುಮಾರು 350 ಸಾಧಕರು ತಮ್ಮ ಪ್ರೀತಿ, ಗೌರವ ಮತ್ತು ಕೃತಜ್ಞತೆಗಳನ್ನು ಅಮರರವರಿಗೆ ಅರ್ಪಿಸಿದರು. ನಂತರ ಗುರೂಜಿಯವರು ಪ್ರತಿಯೊಬ್ಬರನ್ನೂ ವೈಯಕ್ತಿಕವಾಗಿ ಆಶೀರ್ವದಿಸಿದರು.

ಇದಕ್ಕೆ ಒಂದು ವಾರ ಮೊದಲು, ತಪೋನಗರ ನಿವಾಸಿಗಳೆಲ್ಲಾ ಸೇರಿ ಸುತ್ತಮುತ್ತಲ್ಲಿದ್ದ ಪ್ಲಾಸ್ಟಿಕ್ ತ್ಯಾಜ್ಯವಸ್ತುಗಳನ್ನು ಆಯ್ದುತೆಗೆದು, ತಪೋನಗರವನ್ನು ಸ್ವಚ್ಛಗೊಳಿಸಿದರು. ಅಮರ ಜಯಂತಿಯ ದಿನ ಮುಂಜಾನೆಯೇ ನಿವಾಸಿಗಳೆಲ್ಲಾ ಸೇರಿ ತಪೋನಗರವನ್ನು ಹೂವುಗಳಿಂದ ಅಲಂಕರಿಸಿದರು. ಆ ದಿನದ ಕಾರ್ಯಕ್ರಮದ ಎಲ್ಲ ವ್ಯವಸ್ಥೆಗಳನ್ನೂ ಸುವ್ಯವಸ್ಥಿತವಾಗಿ ಮಾಡಲಾಗಿತ್ತು. ಇವುಗಳ ಜೊತೆಗೆ ಅಂದಿನ ಕಾರ್ಯಕ್ರಮದಲ್ಲಿ ಗುರೂಜಿಯವರ ಮತ್ತು ಇತರರ ಮಾತುಗಳು ಹೃದಯಸ್ಪರ್ಶಿಯಾಗಿದ್ದವು.

ತಪೋನಗರ ನಿವಾಸಿ ಶ್ರೀವತ್ಸನ್‌ರವರು, ಗುರೂಜಿ ಮತ್ತು ಎಲ್ಲರೊಂದಿಗೆ, ಅವರ ಹೊಸಮನೆಯ ಗೃಹಪ್ರವೇಶವನ್ನು ದೈವೀಚೈತನ್ಯಗಳಿಂದ ತುಂಬುವ ಮೂಲಕ ಮಾಡಿದರು. ಇನ್ನೂ ಅನೇಕರು ತಮ್ಮ ಮನೆಗಳನ್ನು ಕಟ್ಟಿಸುವ ಸಿದ್ಧತೆಯಲ್ಲಿದ್ದಾರೆ. ತಪೋನಗರ ಕುಟುಂಬ ದಿನೇ ದಿನೇ ಬೆಳೆಯುತ್ತಿದೆ.

ಇಟಲಿ ದೇಶದಿಂದ ಬಂದ ನಮ್ಮ ದೂರಕಲಿಕೆಯ ಸಾಧಕರಾದ ಶ್ರೀ ರೋಲ್ಯಾಂಡ್ ಪಿಫ್ಲಿಂಗರ್‌ರವರು ತಪೋವನದಲ್ಲಿ ತೆಗೆದ ಕೆಲವು ಫೋಟೋಗಳಲ್ಲಿ ಬೆಳಕಿನ ಗೋಳಗಳಿದ್ದು ಅವುಗಳಲ್ಲಿ ಕೆಲವು ಅತ್ಯಂತ ಪ್ರಕಾಶಮಾನವಾಗಿದ್ದವು. ಇದು, ಇಲ್ಲಿಗೆ ಅನೇಕರು ತಮ್ಮ ಸೂಕ್ಷ್ಮ ಶರೀರಗಳಲ್ಲಿ ಭೇಟಿಮಾಡುತ್ತಾರೆ ಎಂಬುದಕ್ಕೆ ಮತ್ತೊಂದು ಸಾಕ್ಷಿಯಾಗಿದೆ.

ಸುತ್ತಮುತ್ತಲಿನ ಜನರ ಅನುಕೂಲಕ್ಕಾಗಿ ಮತ್ತು ಸುಂದರವಾಗಿ ಮೂಡಿಬರುತ್ತಿರುವ ಆಂಜನೇಯ ದೇವಸ್ಥಾನದ ನಿರ್ಮಾಣ ಕಾರ್ಯವನ್ನು ಸುಗಮಗೊಳಿಸಲು ಬಸ್‌ನಿಲ್ದಾಣವನ್ನು ಮಕ್ಕಳ ಉದ್ಯಾನವನದ ಪಕ್ಕಕ್ಕೆ ಸ್ಥಳಾಂತರಿಸಲಾಗಿದೆ. ದೇವರ ವಿಗ್ರಹ ಸಿದ್ಧವಾಗಿದೆ. ಪೂರ್ಣಗೊಂಡ ದೇವಸ್ಥಾನದ ಅಂದ ನೋಡುವ ಅವಕಾಶ ಎಲ್ಲರಿಗೂ ಲಭ್ಯವಾಗುತ್ತದೆ, ಆದರೆ ಈ ಹಂತಹಂತದ ನಿರ್ಮಾಣದ ಸೊಬಗನ್ನು ಕೆಲವರು ಮಾತ್ರ ಅನುಭವಿಸುತ್ತಾರೆ. ಇದು ಬೆಳಕಿನ ಯುಗದ ಉದಯದ ಹಾಗೆ. ■

## ಲೈಟ್ ಚಾನಲ್ಸ್

### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.com ಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

06-02-2011

ಅಮರ ಜಯಂತಿಯ ದಿನ ನಾಲ್ಕು ಲಕ್ಷ ಜನರು ಲೈಟ್ ಚಾನಲ್ ಮಾಡಿದರು. ಇದು ಬಹುಶಃ ನಾವು ಅವರಿಗೆ ನೀಡಿದ ಅತ್ಯುನ್ನತ ಕಾಣಿಕೆ. ಇದಕ್ಕಾಗಿ ನಾನು ಎಲ್ಲ ಕಾರ್ಯಕರ್ತರನ್ನು ಮತ್ತು ಇದಕ್ಕಾಗಿ ಕೆಲಸ ಮಾಡಿದವರನ್ನು ಅಭಿನಂದಿಸುತ್ತೇನೆ.

ಅಮರ ಅತ್ಯುತ್ತಮ ಮಾನವ ಜೀವಿಯಾಗಿದ್ದರು, ಕಾರಣ ಅವರು ಜೀವ-ಶಕ್ತಿಯನ್ನು ಮತ್ತು ಮಾನವೀಯತೆಯನ್ನು ಅತ್ಯಧಿಕವಾಗಿ ವ್ಯಕ್ತಪಡಿಸುತ್ತಿದ್ದರು. ಮಾನವೀಯತೆ ಎಂದರೆ ಮಾನವ ಸಂಬಂಧವಾದ ಎಲ್ಲವೂ – ಭಾವಾವೇಶಗಳು, ಭಾವುಕತೆ, ಕಾವ್ಯ, ಕಲೆ, ತೋಟಗಾರಿಕೆ, ಸಂಗೀತ, ರೋಮಾಂಚನ, ಆಶ್ಚರ್ಯ, ಭಯ, ಸ್ವಲ್ಪ ಮಾತ್ಸರ್ಯ ಕೂಡ. ಇದು ವಿಶ್ವಾತ್ಮಕತೆಯ (Universalism) ಸಾರ. ವಿಶ್ವಾತ್ಮಕತೆ ಸತ್ಯಯುಗದ ಧರ್ಮವಾಗುತ್ತದೆ.

ಈ ಸಂದರ್ಭದಲ್ಲಿ ನಮ್ಮ ಮಾರ್ಗವನ್ನು ಸಂಕ್ಷೇಪವಾಗಿ, ಧ್ಯಾನಗಳು, ಸಕಾರಾತ್ಮಕತೆ ಮತ್ತು ವಿಶ್ವಾತ್ಮಕತೆಯನ್ನು ಅಭ್ಯಾಸ ಮಾಡುವುದು ಎಂದು ಹೇಳಬಹುದು.

ಹೊಸಯುಗ ಪ್ರಾರಂಭವಾಗಿದೆ. ಫೋಟಾನ್ ಬೆಲ್ಟ್‌ನ ಚೈತನ್ಯಗಳು ಅನೇಕ ಹಗರಣಗಳನ್ನು ಹಾಗೂ ಟ್ಯುನೀಶಿಯಾ, ಈಜಿಪ್ಟ್ ಮತ್ತು ಇತರ ಪ್ರದೇಶಗಳಲ್ಲಿ ಜನರ ಕ್ರಾಂತಿಗಳನ್ನು ಮೇಲ್ಮೈಗೆ ತಂದಿದೆ. ಇದು ಸಾಮಾನ್ಯ ಮನುಷ್ಯನ ಅಂತಃಪ್ರಜ್ಞೆಯನ್ನು ಕಲಕಿದೆ ಮತ್ತು ಇಲ್ಲಿ ಮುಖ್ಯವಾದ ವಿಷಯವೆಂದರೆ ಇಲ್ಲಿಂದ ಹಿಂದಿರುಗಿ ಹೋಗಲು ಸಾಧ್ಯವೇ ಇಲ್ಲ.

ಈ ಸಮಯದಲ್ಲಿ ಧ್ಯಾನ ಮಾಡಿ, ಸಕಾರಾತ್ಮಕರಾಗಿ, ಲೈಟ್ ಚಾನಲ್ ಮಾಡಿ ಮತ್ತು ನಕಾರಾತ್ಮಕತೆಯನ್ನು ತಿರಸ್ಕರಿಸುವುದರ ಮೂಲಕ ಈ ಪ್ರಕ್ರಿಯೆಗಳನ್ನು ಬೆಂಬಲಿಸುವುದು ನಮ್ಮ ಪಾತ್ರವಾಗಿದೆ. ಆಗ ನಾವು, ಈ ಭೂಮಿ ಇದುವರೆಗೆ ನೋಡದೆ ಇರುವ ಅತಿ ದೊಡ್ಡ ಕ್ರಾಂತಿಯಲ್ಲಿ ಭಾಗವಹಿಸಬಹುದು. ಇವುಗಳನ್ನು ನಾವು ಮಾತ್ರ ಅನುಭವಿಸಿದರೆ ಸಾಲದು. ಇತರರಿಗೆ ಈಗಿನ ವಾಸ್ತವತೆಗಳಾದ – ಸತ್ಯಯುಗ, ಫೋಟಾನ್ ಬೆಲ್ಟ್, 2012ಕ್ಕೆ ಸಂಬಂಧಿಸಿದ ಘಟನೆಗಳು ಇತ್ಯಾದಿಗಳ ಬಗ್ಗೆ ಮತ್ತು ಅವರ ಸಾಮರ್ಥ್ಯಗಳ ಬಗ್ಗೆ ಎಚ್ಚೆತ್ತುಕೊಳ್ಳಲು ಸಹಾಯ ಮಾಡದೇ ಹೋದರೆ ನಾವು ಪೂರ್ಣವಾಗಿ ಆಧ್ಯಾತ್ಮಿಕರೆನಿಸುವುದಿಲ್ಲ.

ಪರಸ್ಪರ ಹಂಚಿಕೊಳ್ಳುವುದು ಒಂದು ಆಧ್ಯಾತ್ಮಿಕ ತತ್ವ. ಋಷಿಗಳಿಂದ ಪಡೆದುಕೊಂಡ ಜ್ಞಾನ, ಚೈತನ್ಯಗಳು ಮತ್ತು ಭರವಸೆಗಳನ್ನು ಬೇರೆಯವರೊಂದಿಗೆ ನಾವು ಹಂಚಿಕೊಳ್ಳಬೇಕು. ನಾವು ಧ್ಯಾನ ಮಾಡುವುದಲ್ಲದೆ ಇತರರೂ ಧ್ಯಾನ ಮಾಡುವಂತೆ ಸಹಾಯ ಮಾಡಬೇಕು. ನಾವು ಪ್ರೀತಿ ತೋರಿಸಬೇಕು ಮತ್ತು ಬೇರೆಯವರೂ ಪ್ರೀತಿ ತೋರಲು ಸಹಾಯ ಮಾಡಬೇಕು. ನಾವು ವಿಶ್ವಾತ್ಮಕತೆ ಏನೆಂಬುದನ್ನು ಚೆನ್ನಾಗಿ ಅರಿತಿರಬೇಕು ಮತ್ತು ಬೇರೆಯವರೂ ಅದನ್ನು ಅರಿತುಕೊಳ್ಳುವಂತೆ ಮಾಡಬೇಕು. ಇದು ಆಧ್ಯಾತ್ಮಿಕತೆಯ ವಿಸ್ತೃತವಾದ ಅರ್ಥವಾಗಿದೆ.

ನಮ್ಮೊಳಗೆ ಉಂಟಾಗಿರುವ ಜಾಗೃತಿಯ ಬಗೆಗಿನ ಅಜ್ಞಾನ, ಸಮಾಧಿಯನ್ನು ಅನುಭವಿಸಲು ಮತ್ತು ಋಷಿಗಳನ್ನು ಸಂಪರ್ಕಿಸಲು ಬಹುಶಃ ತಡೆಯುತ್ತದೆ. ನಾವು ಜಾಗೃತರಾಗದಿದ್ದರೆ, ನಮಗಾಗಿ ಪ್ರಪಂಚ ಕಾಯುವುದಿಲ್ಲ ಎಂಬುದನ್ನು ನಾವು ಮನಗಾಣಬೇಕು. ನಾವು ಆ ವೈಭವವನ್ನು ಕಳೆದುಕೊಳ್ಳುತ್ತೇವೆ.

ನಾವು ಪ್ರತಿಯೊಂದು ಅಸಾಧಾರಣ ಬೆಳವಣಿಗೆಯ ಬಗ್ಗೆ ಜಾಗರೂಕರಾಗಿರಬೇಕು. 7000 ವರ್ಷಗಳ ಹಿಂದೆ ಪಿರಮಿಡ್‌ಗಳ ಕೆಳಗೆ ಸಂಗ್ರಹಿಸಿ ಇಡಲಾಗಿದ್ದ ಚೈತನ್ಯಗಳಲ್ಲಿ ಸ್ವಲ್ಪಭಾಗ ಮಾತ್ರ ಬಿಡುಗಡೆ ಮಾಡಲಾಗಿದೆ ಎಂದು ಋಷಿಗಳು ತಿಳಿಸಿದ್ದಾರೆ. ನಾವು ಅದರ ಪರಿಣಾಮವನ್ನು ಜನರ ಪ್ರತಿಭಟನೆಯಲ್ಲಿ ನೋಡುತ್ತಿದ್ದೇವೆ.

ನಮ್ಮಲ್ಲಿ ಪ್ರತಿಯೊಬ್ಬರೂ ದಾರ್ಶನಿಕರಾಗಬೇಕಾಗಿದೆ. ನಾವು ಎಲ್ಲಿದ್ದೇವೋ ಅಲ್ಲಿಂದಲೇ, ನಮ್ಮದೇ ಆದ ಮಟ್ಟದಲ್ಲಿ ಕೆಲಸ ಮಾಡಬೇಕಾಗಿದೆ. ಪ್ರಾಮಾಣಿಕ ನಾಯಕತ್ವ ಈಗಿನ ಅಗತ್ಯವಾಗಿದೆ.

ಭಗವಂತ ಕಲ್ಕಿ ಮತ್ತು ಋಷಿಗಳು ಎಲ್ಲ ಆಗುಹೋಗುಗಳ ಮೇಲ್ವಿಚಾರಣೆ ಮಾಡುತ್ತಿದ್ದಾರೆ ಮತ್ತು ಸೂಕ್ಷ್ಮ ಹಂತದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂಬುದು ತಿಳಿದಿದೆ. ಆದ್ದರಿಂದ ಅವರಲ್ಲಿ ವಿಶ್ವಾಸವನ್ನಿಟ್ಟು, ಅನುಸರಿಸುವುದು ಅತ್ಯುತ್ತಮವಾದ ಮಾರ್ಗ.

ಇಂದಿನಿಂದ ನಾವು ಅನುಸರಿಸುತ್ತಿರುವ ಧ್ಯಾನದ ತಂತ್ರಗಳಲ್ಲಿ ಅನೇಕ ಬದಲಾವಣೆಗಳಾಗಿವೆ. ಅದರಲ್ಲಿ ಎಲ್ಲರೂ ಅನುಸರಿಸುವಂಥ ಸಾರ್ವತ್ರಿಕ ತಂತ್ರವಿದೆ. ನಿಮ್ಮ ಶಾರೀರಿಕ ವ್ಯವಸ್ಥೆಯಲ್ಲಿ ಬೆಳಕು ಇದೆ ಎಂದು ಕಲ್ಪಿಸಿಕೊಳ್ಳಿ, ಆ ಬೆಳಕನ್ನು ಅನುಭವಿಸಿ. ಆದರೆ ಬೆಳಕನ್ನು ಸುಲಭವಾಗಿ ಮತ್ತು ಸುವ್ಯವಸ್ಥಿತವಾಗಿ ಅನುಭವಿಸಲು ಋಷಿಗಳು ಒಂದು ವ್ಯವಸ್ಥಿತ ವಿಧಾನವನ್ನು ಕೊಟ್ಟಿದ್ದಾರೆ. ಸತ್ಯಯುಗ ಬರುವವರೆಗೂ ಈ ವಿಧಾನದಲ್ಲಿ ಪುನಃ ಬದಲಾವಣೆಗಳಾಗುವುದಿಲ್ಲ.

13-02-2011

ಎಲ್ಲ ಉತ್ತರಗಳು, ಪರಿಹಾರಗಳು, ಸಾಧ್ಯತೆಗಳು ಮತ್ತು ಅವಕಾಶಗಳು ನಮ್ಮೊಳಗೇ ಇವೆ. ಇವು ನಮ್ಮೊಳಗೆ ಇರುವುದನ್ನು ತಿಳಿಯದೇ ನಾವು ಬಹುತೇಕ ಸಮಯ ಹೊರಗಡೆಯೇ ಹುಡುಕುತ್ತೇವೆ. ನಾವು ಒಂದು ರೀತಿಯ ನಿಶ್ಚಲ ಸ್ಥಿತಿಯನ್ನು ಪ್ರವೇಶಮಾಡಿ ಇವುಗಳನ್ನು ವ್ಯಕ್ತಪಡಿಸಲು ಕಲಿಯಬೇಕು. ಧ್ಯಾನ ಮಾಡುವುದರಿಂದ ನಿಶ್ಚಲತೆಯನ್ನು ಪಡೆಯುತ್ತೇವೆ, ನಮ್ಮೊಳಗೆ ಇರುವ ಸಾಧ್ಯತೆಗಳು, ಪ್ರಶ್ನೆಗಳು, ಉತ್ತರಗಳು ಮತ್ತು ಅವಕಾಶಗಳ ಬಗ್ಗೆ ಜಾಗರೂಕರಾಗುತ್ತೇವೆ. ನಿಶ್ಚಲತೆಯಲ್ಲಿ ಅನೇಕ ವಿಷಯಗಳ ಬಗ್ಗೆ ಜಾಗರೂಕರಾಗುತ್ತೇವೆ, ಅತ್ಯಂತ ಮುಖ್ಯವಾಗಿ ಉಪಸ್ಥಿತಿ, ವಿಶಾಲತೆ ಮತ್ತು ಉಪಸ್ಥಿತಿಯಲ್ಲಿರುವ ಏಕತೆ. ಈ ಉಪಸ್ಥಿತಿಯೇ ದೇವರು. ನಾವು ಈ ಉಪಸ್ಥಿತಿಯನ್ನು ಅನುಭವಿಸುವುದನ್ನು ಪ್ರಾರಂಭಿಸೋಣ. ಆಗ ನಾವು ಏಕತೆಯನ್ನು ಮತ್ತು ನಿಜವಾದ ಪ್ರೀತಿಯನ್ನು ಅನುಭವಿಸುತ್ತೇವೆ. ಇವುಗಳ ಬಗ್ಗೆ ನೀವು ಚಿಂತನೆ ಮಾಡಿ.

ನಿಶ್ಚಲತೆಯನ್ನು ನಾವು ಪ್ರವೇಶ ಮಾಡಿದಾಗ ಅನೇಕ ವಾಸ್ತವತೆಗಳು ಮತ್ತು ಅನೇಕ ಆಯಾಮಗಳ ಬಗ್ಗೆ ಜಾಗರೂಕರಾಗುತ್ತೇವೆ. ನಿಶ್ಚಲತೆಯನ್ನು ಪ್ರವೇಶ ಮಾಡಿದ ನಂತರವೂ ಅದನ್ನು ವ್ಯಕ್ತಪಡಿಸಲು ಒಂದು ಬಲವಾದ ಉದ್ದೇಶವನ್ನು ಹೊಂದಿರಬೇಕು.

ನಾವು ಆತ್ಮಾವಲೋಕನ, ವಿಶ್ಲೇಷಣೆಗಳನ್ನು ಮಾಡಿಕೊಳ್ಳಬೇಕಲ್ಲದೆ ನಮ್ಮ ಒಳ್ಳೆಯ ಅಥವಾ ಒಳ್ಳೆಯದಲ್ಲದ ನಡತೆಗಳಿಗೆ ಹೊಣೆಗಾರರಾಗಿರಬೇಕು. ನಾವು ಎಲ್ಲದಕ್ಕೂ ಕಾರಣಗಳನ್ನು ಮತ್ತು ನೆಪಗಳನ್ನು ಹೊರಗಡೆ ಹುಡುಕಬಾರದು. ಹೀಗೆ ಸತ್ಯವನ್ನು ಅಭ್ಯಾಸ ಮಾಡಬೇಕು ಮತ್ತು ಸತ್ಯದ ಜೀವನವನ್ನು ಬಾಳಬೇಕು. ಸಾಧ್ಯವಾದ ಪ್ರತಿಯೊಂದು ರೀತಿಯಲ್ಲಿ, ಪ್ರತಿಯೊಂದು ಸನ್ನಿವೇಶದಲ್ಲಿ ನಾವು ಸತ್ಯವನ್ನು ಅನುಸರಿಸಬೇಕು. ಆಗ ನಮಗೆ ನಮ್ಮ ಸಬಲ ಮತ್ತು ದುರ್ಬಲ ಅಂಶಗಳ ಅರಿವಾಗುತ್ತದೆ. ನಾವು ಯಾವಾಗ ಸರಿ ಇದ್ದೇವೆ ಅಥವಾ ಸರಿ ಇಲ್ಲ ಎಂಬುದನ್ನು ಅರಿಯುತ್ತೇವೆ. ನಮ್ಮ ದೌರ್ಬಲ್ಯಗಳನ್ನು ತಿಳಿದು ಅವುಗಳನ್ನು ಮರುಕಳಿಸದಂತೆ ನಡೆಯುತ್ತೇವೆ. ಹೀಗೆ ಸ್ವಾಭಾವಿಕವಾಗಿ ಬೆಳೆಯುತ್ತೇವೆ ಮತ್ತು ಯಾವ ತಪ್ಪುಗಳನ್ನು ಮಾಡುವುದಿಲ್ಲ. ನಮ್ಮ ಸಾಮರ್ಥ್ಯ, ನಮ್ಮ ಘನತೆ ಮತ್ತು ನಮ್ಮ ಆತ್ಮವಿಶ್ವಾಸ ಸುಧಾರಿಸುತ್ತವೆ.

20-02-2011

ನಾವು ಚೆಕಪ್‌ಗಳಲ್ಲಿ ಹೇಳಿದುದನ್ನು ನೀವು ಒಪ್ಪಿಕೊಳ್ಳಬೇಕು, ಏಕೆಂದರೆ ಅವುಗಳನ್ನು ನಿರ್ಧರಿಸುವವರು ಋಷಿಗಳು, ಮನುಷ್ಯರಲ್ಲ. ಬಹಳ ಅಪರೂಪವಾಗಿ ಕೆಲವರು ಸ್ವಲ್ಪ ವಾದಕ್ಕಿಳಿದ ಪ್ರಸಂಗಗಳಿವೆ. ನೀವು ಚೆಕಪ್‌ಗಾಗಿ ಬಂದ ಪ್ರತಿ ಬಾರಿಯೂ ಚೈತನ್ಯಗಳನ್ನು ಪಡೆಯುವಿರಿ, ದೀಕ್ಷೆಯನ್ನು ಪಡೆಯುವಿರಿ. ಚೆಕಪ್‌ಗಳನ್ನು ತಪ್ಪಿಸಿಕೊಳ್ಳಬೇಡಿ.

ಚೆಕಪ್ ಸಂದರ್ಭದಲ್ಲಿ ಋಷಿಗಳು, ಎಷ್ಟು ದಿನಗಳು ಧ್ಯಾನ ಮಾಡಲಾಗಿದೆ ಮತ್ತು ಧ್ಯಾನದ ಗುಣಮಟ್ಟವನ್ನು ಪರಿಗಣಿಸುತ್ತಾರೆ. ಧ್ಯಾನ ಮಾಡದ ಸಮಯದಲ್ಲಿ ಅವರು ನಮ್ಮ ನಡತೆ, ಆಲೋಚನೆಗಳು ಮತ್ತು ಭಾವೋದ್ವೇಗಗಳು ಹೇಗಿರುತ್ತವೆ ಹಾಗೂ ಈ ಕಾಲದಲ್ಲಿ ನಾವು ಎಷ್ಟು ಶಾಂತತೆಯಿಂದ ಇರುತ್ತೇವೆ, ನಮ್ಮ ಪರಿಶುದ್ಧತೆಯ

## ಗುರೂಜಿಯವರ ನುಡಿಗಳು

**(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)**

**(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)**

ಮಟ್ಟ, ಪ್ರಾಮಾಣಿಕತೆಯ ಮಟ್ಟ, ನಾವು ತೋರಿಸುವ ಪ್ರೀತಿ ಮತ್ತು ನಾವು ಬದಲಾವಣೆಯಾಗಲು ಮನಸ್ಸು ಮಾಡಿದ್ದೇವೆಯೆ ಇಲ್ಲವೆ ಎಂಬುದನ್ನು ಗಮನಿಸುತ್ತಾರೆ. ಅವರು ಯಾವಾಗಲೂ ನಮ್ಮ ಮೇಲ್ವಿಚಾರಣೆ ಮಾಡುತ್ತಿರುತ್ತಾರೆಂಬುದನ್ನು ನಾವು ತಿಳಿಯಬೇಕು. ಚೆಕಪ್ ಮಾಡುವವರನ್ನು ಸ್ವಲ್ಪ ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ಮಾಡಲಾಗುತ್ತದೆ.

ಅನುಭಾವಿಗಳು ಮೊದಲು ಚಿಂತನೆ ಮಾಡುತ್ತಾರೆ, ನಂತರ ಬುದ್ಧಿಯಾಚೆಗೆ ಅರಿವನ್ನು ಕೊಂಡೊಯ್ಯುತ್ತಾರೆ. ಅಲ್ಲಿ ಅಂತರ್‌ಗ್ರಹಣಶಕ್ತಿ ಅನುಭಾವದ ಜಗತ್ತಿನಲ್ಲಿರುವ ಜ್ಞಾನವನ್ನು ಸೆರೆಹಿಡಿಯುತ್ತದೆ ಮತ್ತು ಗ್ರಹಿಸುತ್ತದೆ. ಹೀಗೆ ಗ್ರಹಿಸಿದ ಜ್ಞಾನ, ಬುದ್ಧಿಗೆ ವರ್ಗವಾಗುತ್ತದೆ. ಅಲ್ಲಿ ಅದು ಆಲೋಚನೆಗಳಾಗಿ ಪರಿವರ್ತನೆಯಾಗಿ ಮನಸ್ಸಿನ ಮೂಲಕ ಮೆದುಳಿಗೆ ಸಾಗುತ್ತದೆ. ಮೆದುಳು ಆಲೋಚನೆಗಳನ್ನು ಪದಗಳನ್ನಾಗಿ ಮಾರ್ಪಡಿಸುತ್ತದೆ. ಹೀಗೆ ನಾವು ಜ್ಞಾನವನ್ನು ಪಡೆಯುತ್ತೇವೆ. ಅಂತರ್‌ಗ್ರಹಣಶಕ್ತಿ ಹೆಚ್ಚಿನ ವಿಷಯ ಗ್ರಹಿಸುತ್ತದೆ. ನಾವು ಧ್ಯಾನ ಮಾಡುವುದರಿಂದ ಮತ್ತು ವೈಶಾಲ್ಯತೆಯನ್ನು ಹೆಚ್ಚು ಅನುಭವಿಸುವುದರಿಂದ, ಇದನ್ನು ಹೆಚ್ಚು ಚುರುಕುಗೊಳಿಸಬೇಕು. ಬೇರೆ ಸಮಯಗಳಲ್ಲಿ ಕೂಡಾ ಆಕಾಶ, ಸಾಗರ ಮತ್ತು ಬೆಳಕಿನ ಸಾಗರವನ್ನು ಸ್ಮರಿಸುವುದರಿಂದ ವಿಶಾಲತೆಯನ್ನು ನಾವು ಅನುಭವಿಸಬಹುದು. ಬುದ್ಧಿಗೆ ಮಿತಿ ಇದೆ. ಹೆಚ್ಚು ಓದುವುದರಿಂದ ಮತ್ತು ಚಿಂತನೆ ಮಾಡುವುದರಿಂದ ನಾವು ಅದರ ಸಾಮರ್ಥ್ಯವನ್ನು ಹೆಚ್ಚಿಸಬೇಕು. ಈ ಅಂಶಗಳ ಬಗ್ಗೆ ನೀವು ಚಿಂತನೆ ಮಾಡಬೇಕು.

ಜ್ಞಾನದ ಅನ್ವೇಷಣೆ ಸತ್ಯದ ಅನ್ವೇಷಣೆಯಾಗಿದೆ. ಒಬ್ಬ ಪ್ರಾಮಾಣಿಕ ವ್ಯಕ್ತಿ ಮಾತ್ರ ಸತ್ಯವನ್ನು ಅನ್ವೇಷಿಸಬಲ್ಲ. ಜ್ಞಾನಕ್ಕೆ ಬುದ್ಧಿ ಇದೆ. ಅದು ಒಬ್ಬ ವ್ಯಕ್ತಿಯನ್ನು ತಲುಪಬೇಕೇ ಅಥವಾ ಬೇಡವೇ ಎಂಬುವುದನ್ನು ನಿರ್ಧರಿಸುತ್ತದೆ. ಎಲ್ಲ ಜ್ಞಾನವೂ ಲೌಕಿಕ ಬ್ರಹ್ಮಾಂಡಕ್ಕೆ ಸಂಬಂಧಿಸಿದ ಒಂದು ಪದರದಲ್ಲಿದೆ. ಸಾವಿರಾರು ವರ್ಷಗಳಿಂದ ಅಗಾಧ ಜ್ಞಾನವನ್ನು ಸಂಗ್ರಹಿಸಿರುವ ಋಷಿಗಳೊಂದಿಗೆ ಕೂಡ ಈ ಜ್ಞಾನ ಇರುತ್ತದೆ. ಈ ಪದರದಿಂದ ಜ್ಞಾನವನ್ನು ಕೆಳತರುವುದು ಕಷ್ಟ. ಋಷಿಗಳನ್ನು ಸಂಪರ್ಕಿಸಿದಾಗ ಆಯಾ ಸಂದರ್ಭದ ಅಗತ್ಯಕ್ಕೆ ತಕ್ಕಂತೆ ಋಷಿಗಳು ಮೇಲೆ ಹೇಳಿದ ರೀತಿಯಲ್ಲಿ ಜ್ಞಾನವನ್ನು ನಮಗೆ ತಲುಪಿಸುತ್ತಾರೆ. ಜ್ಞಾನ ಪದಗಳ ರೂಪದಲ್ಲಿ ಬರುತ್ತದೆ. ಈ ಜ್ಞಾನ ಪದರದ ಮುಖ್ಯಸ್ಥೆ ಸರಸ್ವತಿ ದೇವಿ. ಈ ಪದರದಲ್ಲಿ ಗತಕಾಲದ ಮತ್ತು ಭವಿಷ್ಯತ್ತಿನ ಜ್ಞಾನ ದೊರೆಯುತ್ತದೆ. ಆಕಾಶಿಕ ದಾಖಲೆಗಳು ಅದರ ಒಂದು ಭಾಗ. ಲೌಕಿಕ ಬ್ರಹ್ಮಾಂಡದಾಚೆ ದೈವೀಲೋಕಗಳಲ್ಲಿ ಜ್ಞಾನ ಅಡಗಿದೆ. ಇದನ್ನು ಪಡೆಯಬೇಕಾದರೆ ನಾವು ದೀರ್ಘಕಾಲದವರೆಗೆ ಆಳವಾಗಿ ಧ್ಯಾನ ಮಾಡಬೇಕು ಮತ್ತು ಈ ಲೋಕಗಳ ಮುಖ್ಯಸ್ಥನೆನಿಸಿದ ಭಗವಂತ, ಸ್ವತಃ ಮಹಾವಿಷ್ಣುವನ್ನೇ ಸಮೀಪಿಸಬೇಕು. ಸಾರ್ವತ್ರಿಕ ಕಲ್ಯಾಣಕ್ಕೆ ಸಹಾಯ ಆಗುವಂತಿದ್ದರೆ ಮಾತ್ರ ಜ್ಞಾನವನ್ನು ಕೊಡಲಾಗುವುದೇ ಹೊರತು ವೈಯಕ್ತಿಕ ಅಥವಾ ಸ್ವಾರ್ಥದ ಬಳಕೆಗೆ ಕೊಡುವುದಿಲ್ಲ. ಯಾರು ಇಂಥ ಜ್ಞಾನವನ್ನು ಸ್ವಾರ್ಥಕ್ಕೆ ಮಾರುತ್ತಾರೋ ಅಂಥವರು ತಮ್ಮ ಮುಂದಿನ ಜನ್ಮದಲ್ಲಿ ಮಾನಸಿಕ ವಿಕಲತೆಯಿಂದ ಜನಿಸುತ್ತಾರೆ. ಇದು ಋಷಿಗಳಿಂದ ಬಂದಿರುವ ಮಾಹಿತಿ.

ಜ್ಞಾನವನ್ನು ಕೆಳತರುವ ಜನರು ಅತ್ಯಂತ ಎಚ್ಚರಿಕೆಯಿಂದ ಇರಬೇಕು. ಜ್ಞಾನವನ್ನು ವಿಕೃತಗೊಳಿಸಬಾರದು. ಹಾಗೆ ಮಾಡಿದರೆ ಅವರು ಶಿಕ್ಷಿಸಲ್ಪಡುತ್ತಾರೆ. ಜ್ಞಾನ ಬೆಳಕಿನಂತೆ, ಯಾವಾಗಲೂ ಪರಿಶುದ್ಧ. ಅದಕ್ಕೆ ಬಣ್ಣ ಹಚ್ಚಬೇಕಾಗಿಲ್ಲ.

27–02–2011

ನಾವು ಹೆಚ್ಚು ವಿಶ್ಲೇಷಣೆ ಮಾಡಬಾರದು. ನಾವು ಎಲ್ಲವನ್ನೂ ಅರ್ಥಮಾಡಿಕೊಳ್ಳಲಾಗುವುದಿಲ್ಲ ಮತ್ತು ಎಲ್ಲವನ್ನೂ ಅರ್ಥಮಾಡಿಕೊಳ್ಳಬೇಕಾಗಿಲ್ಲ. ನಾವು ಎಲ್ಲವನ್ನೂ ತಿಳಿಯುವ ಅಗತ್ಯವೂ ಇಲ್ಲ. ಮೇಲಿನ ಪದರದಲ್ಲಿ ಹೆಚ್ಚಿನ ಜ್ಞಾನವಿದೆ. ಯಾವುದೇ ಸಂದರ್ಭದಲ್ಲಿ ಈ ಮಟ್ಟಕ್ಕೆ ನಾವು ಎಲ್ಲಾ ಜ್ಞಾನವನ್ನು ತರಲಾಗುವುದಿಲ್ಲ. ನಾವು ಅಂತರ್‌ಗ್ರಹಣಶಕ್ತಿಯಿಂದ ಸ್ವಲ್ಪ ಮಟ್ಟಿಗೆ ತಿಳಿಯಬಹುದಾದರೂ, ಅದನ್ನು ನಾವು ಈ ಮಟ್ಟದಲ್ಲಿ ತಿಳಿಯಲಾಗುವುದಿಲ್ಲ. ಆದರೆ ಈ ಜ್ಞಾನ ಕೂಡ ನಮ್ಮ ವಿವೇಕವನ್ನು ಹೆಚ್ಚಿಸುವುದರ ಮೂಲಕ ನಮಗೆ ಸಹಕರಿಸುತ್ತದೆ.

ನಾವು ಎಲ್ಲರಂತೆ ಸಾಧಾರಣ ಮನುಷ್ಯರಲ್ಲ ಎಂಬುದನ್ನು ಮನಗಾಣುವುದು ಬಹಳ ಮುಖ್ಯ. ನಾವು ಧ್ಯಾನಿಗಳು; ನಮಗೆ ಜವಾಬ್ದಾರಿಗಳು ಮತ್ತು ಕರ್ತವ್ಯಗಳಿವೆ. ಇವುಗಳನ್ನು ಮನಗಂಡಾಗ ಮಾತ್ರ ನಾವು ಧ್ಯಾನಿಗಳ ಹಾಗೆ ಬದುಕುತ್ತೇವೆ. ಆಗ ಧ್ಯಾನದಿಂದ ಪ್ರಯೋಜನಗಳು ದೊರಕುತ್ತವೆ. ನನ್ನ ಗುರು, 'ಒಂದು ಸಾವಿರ ಮಂದಿಯಲ್ಲಿ ಒಬ್ಬ ಧ್ಯಾನಿ ವಿಜ್ರಂಭಿಸುತ್ತಾನೆ' ಎಂದು ಹೇಳಿದ್ದಾರೆ. ನಮ್ಮ ನಡತೆ, ನಾವು ಬದುಕುವ ರೀತಿ ಮುಖ್ಯ.

ಧ್ಯಾನ, ಒಳಗಿನ ಮತ್ತು ಹೊರಗಿನ ಪ್ರಪಂಚದ ನಡುವೆ ಒಂದು ಸೇತುವೆಯಂತೆ ಕೆಲಸ ಮಾಡುತ್ತದೆ. ಧ್ಯಾನ ನಮ್ಮ ಮತ್ತು ದೇವರ ನಡುವೆ, ಲೌಕಿಕ ಮತ್ತು ಆಧ್ಯಾತ್ಮಿಕ ಜೀವನಗಳ ನಡುವೆ, ನಮ್ಮ ಮತ್ತು ಸೃಷ್ಟಿಯ ಮಧ್ಯೆ, ನಮ್ಮ ಮತ್ತು ಋಷಿಗಳ ಮಧ್ಯೆ, ನಮ್ಮ ಮತ್ತು ಇತರರ ಮಧ್ಯೆ ಹಾಗೂ ನಮ್ಮ ಮತ್ತು ಸೂಕ್ಷ್ಮ ಪ್ರಪಂಚಗಳ ಮಧ್ಯೆ, ಸೇತುವೆಯಂತೆ ಕಾರ್ಯ ನಿರ್ವಹಿಸುತ್ತದೆ.

ನಮ್ಮ ಶರೀರ ವಿಶ್ರಾಂತಿ ತೆಗೆದುಕೊಳ್ಳುವಾಗ, ಮನಸ್ಸು ಮತ್ತು ಬುದ್ಧಿ ಕೂಡಾ ವಿಶ್ರಮಿಸುತ್ತವೆ. ವಿಶ್ರಾಂತಿ ಇಲ್ಲವಾದರೆ ಇವು ಅಡಚಣೆಗಳನ್ನು ಮತ್ತು ವಿಮುಖತೆಗಳನ್ನು ಉಂಟುಮಾಡುತ್ತವೆ. ಧ್ಯಾನ ಮಾಡುವುದಕ್ಕೆ ಮೊದಲು ದೇಹದ ಪ್ರತಿಯೊಂದು ಭಾಗವೂ ವಿಶ್ರಮಿಸಬೇಕು.

ಯಶಸ್ವೀ ಧ್ಯಾನಕ್ಕಾಗಿ ಈ ಶಾರೀರಿಕ ವ್ಯವಸ್ಥೆಗೆ ನೀವು ನಾಯಕರು, ದೇಹ, ಮನಸ್ಸು, ಬುದ್ಧಿಗಳಲ್ಲ ಎಂಬ ಅರಿವಿರಬೇಕು. ಆಗ, ಅನೇಕ ಆಲೋಚನೆಗಳು ಮತ್ತು ಭಾವನೆಗಳು ಹೊರಗುಳಿಯುತ್ತವೆ ಮತ್ತು ಅವು ನಿಮ್ಮನ್ನು ಆಳುವುದಿಲ್ಲ.

ಧ್ಯಾನದಲ್ಲಿ ನಾವು ಆಲೋಚನೆಗಳನ್ನು, ಭಾವೋದ್ವೇಗಗಳನ್ನು, ತಂತ್ರವನ್ನು ಕೂಡಾ ಬಿಡಬೇಕು.

ಧ್ಯಾನದಲ್ಲಿ ನಾವು ಯಾವಾಗಲೂ ಜ್ಞಾನ ಮತ್ತು ಚೈತನ್ಯಗಳನ್ನು ನಮಗೆ ತಿಳಿಯದಂತೆ ಪಡೆಯುತ್ತೇವೆ. ಇವುಗಳನ್ನು ನಾವು ನಮ್ಮ ಅರಿವಿಲ್ಲದೆಯೇ ಬಳಸುತ್ತೇವೆ.

ಧ್ಯಾನದಲ್ಲಿ ಮೊದಲು ಮೌನ, ನಂತರ ನಿಶ್ಚಲತೆ, ಆನಂತರ ಬೆಳಕನ್ನು ಅರಿಯುತ್ತೇವೆ. ನಾವು ಇವೆಲ್ಲವನ್ನು ಪರಿಶೋಧಿಸಬೇಕು ಮತ್ತು ಅನುಭವಿಸಬೇಕು.

ನೀವು ಧ್ಯಾನಕ್ಕೆ ಕುಳಿತಾಗ, ಎಷ್ಟು ಹೊತ್ತು ಕುಳಿತಿರಬೇಕೆಂದು ಚಿಂತಿಸಬೇಕಿಲ್ಲ. ದೇಹದ ಗಡಿಯಾರವೇ ನಿಮ್ಮನ್ನು ಮಾರ್ಗದರ್ಶಿಸುತ್ತದೆ.

ಅನುಭವಗಳನ್ನು ಅರಸಬೇಡಿ. ನೀವು ಅನುಭವಗಳನ್ನು ಅರಸಿದರೆ, ಮನಸ್ಸು ಏನನ್ನು ಬೇಕಾದರೂ ಒದಗಿಸುತ್ತದೆ.

ನಿಮ್ಮ ಆಧ್ಯಾತ್ಮಿಕ ಪ್ರಗತಿಯನ್ನು ನಿರ್ಧರಿಸುವ ಅನೇಕ ವಿಧಾನಗಳಿವೆ, ಆದರೆ ನೀವು ಅವು ಯಾವುದನ್ನೂ ಅನುಸರಿಸಬೇಕಾಗಿಲ್ಲ. ನಾವು ಹೇಳಿರುವುದು ನಿಮಗೆ ಅರ್ಥವಾಗಿದೆಯೇ? ನೀವು ಎಲ್ಲವನ್ನು ಒಪ್ಪಿಕೊಂಡಿದ್ದೀರ? ಅಥವಾ ನೀವು ಈ ವಿಷಯದಲ್ಲಿ ಉದಾಸೀನರಾಗಿದ್ದೀರ? ಎಂಬುದನ್ನು ಆಗಾಗ್ಗೆ ಪ್ರಶ್ನಿಸಿಕೊಳ್ಳಿ.

ನನಗೆ ಮಾತಿನಲ್ಲಿ, ಜನಗಳಲ್ಲಿ ಆಸಕ್ತಿ ಕಳೆದುಹೋಗುತ್ತಿದೆ. ನಾನು ಬಲವಂತದಿಂದ ಇಲ್ಲಿ ಕುಳಿತು, ನಿಮ್ಮೊಂದಿಗೆ ಮಾತನಾಡುತ್ತಿದ್ದೇನೆ. ಅದು ನನ್ನ ಕೆಲಸ. ಅದನ್ನು ತಪ್ಪಿಸುವಂತಿಲ್ಲ. ನಾನು ಏಕಾಂತದಲ್ಲಿರಲು ಬಯಸುತ್ತೇನೆ. ನಾನು ಹೆಚ್ಚು ಧ್ಯಾನ ಮಾಡಬಯಸುತ್ತೇನೆ. ಇಲ್ಲಿಗಿಂತ ಅಲ್ಲಿಯೇ ಹೆಚ್ಚು ಕಾಲ ಕಳೆಯಲು ಬಯಸುತ್ತೇನೆ. ಬಹುಶಃ ಇದು ಎಲ್ಲರಿಗೂ ಸ್ವಾಭಾವಿಕವಾಗಿ ಆಗುತ್ತದೆ. ಮುಂದೆ ಎಂದಾದರೂ ಒಂದು ದಿನ ನಾನು ಇಲ್ಲಿಗೆ ಬಂದು, ಏನನ್ನೂ ಮಾತನಾಡದೆ ಕುಳಿತುಕೊಳ್ಳಬಹುದು. ನಾವು ಸುಮ್ಮನೆ ಕುಳಿತು ಧ್ಯಾನ ಮಾಡಬಹುದು. ಬಹುಶಃ ಆ ದಿನಗಳು ಸಮೀಪಿಸುತ್ತಿವೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

## ಗುರೂಜಿಯವರಿಂದ ವಿಶೇಷ ಸೂಚನೆಗಳು

- ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಗುರೂಜಿಯವರಿಗೆ ಬರೆದ ಪತ್ರಗಳ ಆಯ್ದ ಭಾಗಗಳು

ಸಂ: ವೈಶಾಲಿ ಜೋಶಿ; ಅನು: ಸುಧಾಕರ್

ನಾನು ಬೆಳಕಿಗೆ ಸಂಪೂರ್ಣವಾಗಿ ಶರಣಾಗಿದ್ದೇನೆ ಮತ್ತು ಬೆಳಕು ನನ್ನ ಎಲ್ಲ ಕಷ್ಟಸಮಯಗಳಲ್ಲಿ ಮಾರ್ಗದರ್ಶಿಸುತ್ತಿದೆ. ನಾನು ಅಸಹಾಯಕಳಾಗಿದ್ದಾಗಲೆಲ್ಲ ಬೆಳಕು ಮಾರ್ಗದರ್ಶನ ನೀಡಿದೆ. ಕಷ್ಟಗಳನ್ನು ದಾಟಲು ಉತ್ತೇಜನ ನೀಡಿ, ಸಹಾಯಮಾಡಿದೆ. ಧ್ಯಾನ ಮಾಡುವಾಗ ನನ್ನೊಳಗಿನ ನಿಶ್ಚಲತೆ ಹೆಚ್ಚಾಗುತ್ತಿದೆ. ಚೈತನ್ಯಗಳು ಬೆಳಕಿನ ರೂಪದಲ್ಲಿ ನನ್ನ ಬಳಿಗೆ ಬರುತ್ತಿರುವುದನ್ನು ಕೆಲವು ಸಲ ಅನುಭವಿಸಿದ್ದೇನೆ.

– ನಳಿನಿ ರಾಜಶೇಖರ್

19–1–2011ರಂದು ಆನೇಕಲ್‌ನಲ್ಲಿ ನಡೆದ ರಿಟ್ರೀಟ್ ತುಂಬಾ ಚೆನ್ನಾಗಿತ್ತು. ಪೂರ್ಣಚಂದ್ರ ಮತ್ತು ನಕ್ಷತ್ರಗಳಿಂದ ತುಂಬಿದ್ದ ಆಕಾಶ ನಮ್ಮಲ್ಲಿ ಪ್ರಶಾಂತತೆಯನ್ನು ತಂದಿತ್ತು. ಅಂದಿನ ವಿಚಾರವಿನಿಮಯ ಸೆಷನ್ ಅನೇಕ ಮಾಹಿತಿಗಳನ್ನೊಳಗೊಂಡಿತ್ತು. ದೀಪಗಳನ್ನು ಆರಿಸಿದಾಗ ಪ್ರಕೃತಿಯ ಪೂರ್ಣ ಸೌಂದರ್ಯಕ್ಕೆ ನಾವು ತೆರೆದುಕೊಂಡೆವು. ನಮಗೆ ಎಲ್ಲ ರೀತಿಯ ಅನುಕೂಲಗಳನ್ನು ಮಾಡಿಕೊಡಲು ಆನೇಕಲ್‌ನ ಕಾರ್ಯಕರ್ತರು ತುಂಬ ಶ್ರಮವಹಿಸಿದ್ದರು. ನಿಮ್ಮೊಂದಿಗೆ ಮತ್ತು ಮಾನಸ ಕುಟುಂಬದೊಂದಿಗೆ ಇರಲು ಅವಕಾಶ ಕಲ್ಪಿಸಿದ್ದಕ್ಕಾಗಿ ನಿಮಗೆ ವಂದನೆಗಳು.

– ಕೆ. ರಾಮಚಂದ್ರ

ಧ್ಯಾನದ ಸಮಯದಲ್ಲಿ ನನ್ನ ಅರಿವು, ಹೊಳೆಯುತ್ತಿದ್ದ ಬಿಳಿ ಬೆಳಕನ್ನು ಮತ್ತು ವಿಶ್ವದೊಂದಿಗೆ ಏಕತೆಯನ್ನು ಅನುಭವಿಸುವುದಕ್ಕಾಗಿ ವಿಸ್ತಾರಗೊಳ್ಳುತ್ತದೆ. ಆಗ ನನಗೆ ದೇಹದ ಅರಿವು ಇರುವುದಿಲ್ಲ. ಧ್ಯಾನದಿಂದ ಹೊರಬರಲು ಹೆಚ್ಚು ಸಮಯ ಬೇಕಾಗುತ್ತದೆ. ನಾನು ಕಣ್ಣು ತೆರೆದಾಗ ಸಂತೃಪ್ತತೆ ಮತ್ತು ಹಗುರತೆಯ ಅನುಭವವಾಗುತ್ತದೆ. ಆಗತಾನೇ ಹುಟ್ಟಿದ ಮಗುವಿನ ನಗೆಯಂಥ ಹೊಸತನ ನನ್ನಲ್ಲಿ ಅನುಭವವಾಗುತ್ತದೆ.

– ಮಧುಕರ್ ಷಾ

ಧ್ಯಾನದ ಸಮಯದಲ್ಲಿ ಕೆಲವೊಮ್ಮೆ ಬೆಳಕನ್ನು ನೋಡುತ್ತೇನೆ. ಆಗ ನನಗೆ ಅಪಾರವಾದ ಸಂತೋಷವಾಗುತ್ತದೆ. ಒಮ್ಮೆ ಒಂದು ಸನ್ನಿವೇಶ ಸೃಷ್ಟಿಯಾಯಿತು. ಅದರಿಂದಾಗಿ ಸಂಬಂಧಗಳಲ್ಲಿ ಬಿರುಕು ಉಂಟಾಗುವ ಸಾಧ್ಯತೆ ಇತ್ತು. ಆಗ ನಾನು ನಿಮ್ಮನ್ನು ಪ್ರಾರ್ಥಿಸಿದೆ. ಅದರಿಂದಾಗಿ ಸಕಾರಾತ್ಮಕ ಫಲಿತಾಂಶ ದೊರೆಯಿತು. ನಿಮ್ಮ ಅನುಗ್ರಹದ ಅನುಭವ ನನ್ನಲ್ಲಿ ಸಂತೋಷವನ್ನುಂಟುಮಾಡಿತು.

–ಮೃದುಲಾ ಸಾಠೆ

ಯಾವುದೇ ಪ್ರತಿರೋಧವಿಲ್ಲದೆ, ಗಾಳಿ ಎಲ್ಲಿಗೆ ಒಯ್ದರೂ ಅಲ್ಲಿಗೆ ಹಾರಿಹೋಗುವ ಒಂದು ಎಲೆಯಂತೆ ನನ್ನನ್ನು ನೀವು ಮಾಡಿದ್ದೀರಿ. ಮತ್ತು ಈ ಗಾಳಿ ಎಲೆಯನ್ನು ಮುಂದೆ ಮುಂದೆ ಕೊಂಡೊಯ್ಯುತ್ತಿದೆ. ಗೊತ್ತಿರುವುದು, ಗೊತ್ತಿಲ್ಲದಿರುವುದು, ಹಾಡು, ನೃತ್ಯ, ಮಾಸ್ಟರ್, ಯಾಚಕ, ಈ ಎಲ್ಲ ಸ್ಥಿತಿಗಳ ಅನುಭವಗಳನ್ನು ನಿಯಮಿತ ಧ್ಯಾನವಿಲ್ಲದಿದ್ದರೂ ನನಗೆ ನೀವು ಕರುಣಿಸಿದ್ದೀರಿ. ನನ್ನ ಪ್ರೀತಿ, ಕೃತಜ್ಞತೆ ಮತ್ತು ಲೈಟ್ ಚಾನಲಿಂಗ್ ಕೆಲಸಕ್ಕೆ ನನ್ನ ಬದ್ಧತೆ, ಇವುಗಳನ್ನು ಬಿಟ್ಟರೆ ನಿಮಗೆ ಅರ್ಪಿಸಲು ನನ್ನಲ್ಲಿ ಬೇರೇನೂ ಇಲ್ಲ.

– ಪ್ರಗತಿ ರಾಜ್

ನಾವು ಎಷ್ಟೋ ವಿಷಯಗಳನ್ನು ನಿಮ್ಮ ಮುಂದೆ ಹೇಳಬೇಕೆಂದು ಸಿದ್ಧಪಡಿಸಿಕೊಂಡಿರುತ್ತೇವೆ. ಆದರೆ ನಿಮ್ಮನ್ನು ನೋಡಿದ ತಕ್ಷಣ ನಮಗೆ ಮಾತೇ ಬರುವುದಿಲ್ಲ. ನಿಮ್ಮ ಮುಂದೆ ನಾವು ತುಂಬಾ ಚಿಕ್ಕವರು ಎನಿಸುತ್ತದೆ. ನಮ್ಮ ಜೀವನದ ಪ್ರತಿಯೊಂದು ಚಿಕ್ಕ ವಿಷಯಕ್ಕೂ ನೀವು ಗಮನ ಕೊಡುತ್ತೀರಿ. ಇದಕ್ಕಾಗಿ ನಿಮಗೆ ಧನ್ಯವಾದಗಳು. ನಮಗೆ ನಿಮ್ಮಂಥ ಅದ್ಭುತ ಉಡುಗೊರೆಯನ್ನು ಕೊಟ್ಟಿರುವ ಆ ದೇವರರಿಗೆ ಕೃತಜ್ಞತೆ ಸಲ್ಲಿಸುತ್ತೇವೆ.

– ಗಿರೀಶ್

ಜನವರಿ 9ರಂದು ಶಂಬಲ ಗ್ರೂಪ್ ದೀಕ್ಷೆಯ ನಂತರ ನನ್ನ ಭಾವೋದ್ವೇಗಗಳು ಯಾವಾಗಲೂ ಆನಂದದಾಯಕವಾಗಿವೆ. ಯಾವುದೇ ಸಂದರ್ಭದಲ್ಲೂ ಅವು ವಿಷಾದ ಅಥವಾ ನೋವಿಗೆ ಜಾರುವುದಿಲ್ಲ. ಪರಿಸ್ಥಿತಿಗಳನ್ನು ಎದುರಿಸಲು ಈಗ ನನ್ನಲ್ಲಿ ಹೆಚ್ಚು ಧೈರ್ಯ ಮನೆಮಾಡಿದೆ. ತಪೋನಗರ ಒಂದು ದೈವೀಕೃಪೆ, ಅದನ್ನು ಪದಗಳಿಂದ ವ್ಯಕ್ತಪಡಿಸಲು ಆಗುವುದಿಲ್ಲ. ಅದು ಒಂದು ನಿಜವಾದ ಆಶ್ರಯ ತಾಣ, ನೆಮ್ಮದಿಯ ತಾಣ. ಶಾಂತಿ – ಪ್ರೀತಿಗಳಿಂದ ತುಂಬಿತುಳುಕುತ್ತಿರುವ ಈ ಸ್ಥಳ ಸ್ವರ್ಗಕ್ಕಿಂತ ಕೋಟ್ಯಂತರಪಟ್ಟು ಅಮೂಲ್ಯವಾದುದು. ತಪೋನಗರಕ್ಕೆ ಭೇಟಿ ನೀಡಿದ ನನ್ನ ಇಬ್ಬರು ಸ್ನೇಹಿತರು, ತಾವು ಬೇರೊಂದು ಲೋಕದಲ್ಲಿಯೇ ಇರುವಂತೆ ಅನಿಸಿತು, ಎಂದು ಹೇಳಿದರು. ಅವರ ಹೃತ್ಪೂರ್ವಕ ಕೃತಜ್ಞತೆಗಳನ್ನು ನಿಮಗೆ ತಲುಪಿಸುತ್ತಿದ್ದೇನೆ.

– ಸೌಮ್ಯ

ನನ್ನ ಜೀವನಕ್ಕೆ ಬೆಳಕನ್ನು ತಂದುಕೊಟ್ಟಿರುವ ನಿಮಗೆ ಮತ್ತು ಋಷಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸಲು ನನ್ನಲ್ಲಿ ಪದಗಳೇ ಇಲ್ಲ. ಬೆಳಕಿನೊಂದಿಗೆ ಪ್ರೀತಿ ಬಂದಿದೆ. ವಿಶೇಷವಾಗಿ ನನ್ನಂಥವರಿಗೆ, ಅಂತಃಕರಣಕ್ಕಿಂತ ಮನಸ್ಸನ್ನು ಅನುಸರಿಸುವವರಿಗೆ, ಅದೊಂದು ಪ್ರಶಾಂತ ಅನುಭವ. ಕೇವಲ ಧ್ಯಾನ ಮಾಡಿದರೆ ಸಾಲದು ಎಂದು ನೀವು ಯಾವಾಗಲೂ ನಮಗೆ ಹೇಳುತ್ತಿರುತ್ತೀರಿ. ಅದೆಷ್ಟು ಸತ್ಯ! ನಾನು ನನ್ನ ಮಾತನಾಡುವ ರೀತಿ, ವರ್ತನೆ ಮತ್ತು ಆಲೋಚನೆಗಳನ್ನು ಬದಲಾಯಿಸಿಕೊಳ್ಳಲು ಪ್ರಾರಂಭಿಸಿದಾಗ, ನನ್ನ ಸುತ್ತಲಿನ ಜನರಲ್ಲಿ ಬದಲಾವಣೆಗಳನ್ನು ಕಾಣಲು ಪ್ರಾರಂಭಿಸಿದೆ. ನಾನಿನ್ನೂ ಬಹಳ ದೂರ ಸಾಗಬೇಕು. ಆದರೆ ಅದು ಒಂದು ಸುಂದರವಾದ ಪ್ರಯಾಣ.

– ದೀಪ್ತಿ ರಾಘವೇಂದ್ರ

# ಪ್ರಶ್ನೆಗಳು ಮತ್ತು ಉತ್ತರಗಳು

(ಸಂಗ್ರಹ: ಶೋಭಾ ಕೆ. ರಾವ್; ಅನು: ಉಷಾ ವಾಸನ್)

**ಪ್ರ: ನಾನು ನನ್ನ ಮಿತ್ರರಿಗೆ ಹೀಲಿಂಗ್ ಚೈತನ್ಯಗಳನ್ನು ಕಳುಹಿಸಬಹುದೇ?**

ಉ: ನೀವು ತುಂಬಾ ಜಾಗರೂಕರಾಗಿರಬೇಕು. ನೀವು ನಿಮ್ಮ ಅಂತರ್‌ಗ್ರಹಣ ಶಕ್ತಿಯನ್ನು ಉಪಯೋಗಿಸಬೇಕು ಮತ್ತು ಸೂಕ್ತ ವ್ಯಕ್ತಿಗೆ ಹೀಲಿಂಗ್ ಚೈತನ್ಯಗಳನ್ನು ಕಳುಹಿಸಬೇಕು. ಉಳಿದವರಿಗೆ ನೀವು ದೇವರಲ್ಲಿ ಪ್ರಾರ್ಥಿಸಿಕೊಳ್ಳಬಹುದು.

**ಪ್ರ: ಜನರು ಕಾಯಿಲೆಯಿಂದ ಭಾಗಶಃ ಗುಣಮುಖರಾದಾಗ ನಾನು ಹೀಲಿಂಗ್ ಚೈತನ್ಯಗಳನ್ನು ಕಳುಹಿಸುವುದನ್ನು ಮುಂದುವರಿಸಬಹುದೇ?**

ಉ: ಸಾಮಾನ್ಯವಾಗಿ ನೀವು ಹೀಲಿಂಗ್ ಚೈತನ್ಯಗಳನ್ನು ಏಳು ದಿನಗಳವರೆಗೆ ಕಳುಹಿಸಬಹುದು ಮತ್ತು ಹೀಲಿಂಗ್ ಆಗಿದೆಯೇ ಇಲ್ಲವೇ ಎಂದು ನೋಡಬೇಕು. ಭಾಗಶಃ ಉಪಶಮನವಿದ್ದಾಗ ನೀವು ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು. ಅಂತಹ ಸಮಯದಲ್ಲಿ ನೀವು ನನಗೆ ತಿಳಿಸಬೇಕು.

**ಪ್ರ: ಹೀಲಿಂಗ್ ಮಾಡುವುದರಿಂದ ನಾನು ಆಕರ್ಷಿಸುವ ಕರ್ಮಗಳು ನನ್ನ ಆಧ್ಯಾತ್ಮಿಕ ಬೆಳವಣಿಗೆಗೆ ಅಡಚಣೆಯುಂಟು ಮಾಡುವುದೇ?**

ಉ: ನಾವು ಹೀಲಿಂಗ್‌ನ ಎಲ್ಲ ನಿಯಮಗಳನ್ನು ಅನುಸರಿಸಿದರೆ ಆಧ್ಯಾತ್ಮಿಕ ಬೆಳವಣಿಗೆಯಲ್ಲಿ ಯಾವುದೇ ಅಡಚಣೆಗಳಾಗುವುದಿಲ್ಲ.

**ಪ್ರ: ದೇವರನ್ನು ವ್ಯಾಖ್ಯಾನಿಸಬಹುದೇ?**

ಉ: ನಾವು ಎಂದೂ ದೇವರನ್ನು ವ್ಯಾಖ್ಯಾನಿಸಲಾಗುವುದಿಲ್ಲ. ವ್ಯಾಖ್ಯಾನ ಸೀಮಿತಕ್ಕೆ ಅನ್ವಯಿಸುತ್ತದೆ. ದೇವರು ಸೀಮಾತೀತ. ಅವನು ವ್ಯಾಖ್ಯಾನ ಮತ್ತು ವರ್ಣನೆಯನ್ನು ಮೀರಿದವನು. ನಾನು ಅವನನ್ನು ಅನುಭವಿಸಬಹುದು ಅಷ್ಟೆ, ಆದರೆ ಯಾವತ್ತೂ ಸಂಪೂರ್ಣವಾಗಿ ಅಲ್ಲ ಏಕೆಂದರೆ ನಮ್ಮ ಸಾಮರ್ಥ್ಯಗಳಿಂದ ನಾವು ದೇವರನ್ನು ಅನುಭವಿಸುತ್ತೇವೆ.

**ಪ್ರ: ಉನ್ನತ ಪ್ರಜ್ಞೆ ಎಂದರೇನು?**

ಉ: ಅದು ಉನ್ನತ ಮಟ್ಟಗಳಲ್ಲಿರುವ ವಾಸ್ತವಗಳ ಅರಿವು.

**ಪ್ರ: ಪ್ರಳಯ ಕಾಲದಲ್ಲಿ ನಾವು ಭೌತಿಕ ಮತ್ತು ಆಧ್ಯಾತ್ಮಿಕ ಬದುಕನ್ನು ಸರಿದೂಗಿಸಿಕೊಳ್ಳಬೇಕೇ?**

ಉ: ನಾವು ಯಾವಾಗಲೂ, ಪ್ರತಿಸಲ, ಪ್ರತಿದಿನ ಸರಿದೂಗಿಸಿಕೊಳ್ಳಬೇಕು.

**ಪ್ರ: 'ನಾವು ಇಲ್ಲಿ ಕೆಲಸ ಮಾಡಲು ಬಂದಿದ್ದೇವೆ ಮತ್ತು ಸಾಧನೆಗಾಗಿ ಅಲ್ಲ' ಎಂಬ ನಿಮ್ಮ ಹೇಳಿಕೆಯನ್ನು ವಿಸ್ತಾರವಾಗಿ ತಿಳಿಸುತ್ತೀರಾ?**

ಉ: ನಮ್ಮಲ್ಲಿ ಕೆಲವರು ನಮ್ಮ ಸಾಧನೆಯನ್ನು ಯಾವಾಗಲೋ ಮುಗಿಸಿದ್ದೇವೆ. ನಾವು ಮುಕ್ತಿಗೆ ಅರ್ಹರಾಗಿದ್ದೇವೆ. ಆದರೆ ನಾವು ಪುನಃ ಈ ಭೂಮಿಗೆ ಋಷಿಗಳ ಮಾರ್ಗದರ್ಶನದಲ್ಲಿ ಕೆಲಸ ಮಾಡಲು ಅಪೇಕ್ಷಿಸಿ ಬಂದಿದ್ದೇವೆ. ಈ ಅರ್ಥದಲ್ಲಿ ನಾನು, 'ನಾವು ಕೆಲಸ ಮಾಡಲು ಬಂದಿರುವುದು ಮತ್ತು ಸಾಧನೆಗಾಗಿ ಅಲ್ಲ', ಎಂದು ಹೇಳಿರುವುದು.

**ಪ್ರ: ನಮ್ಮ ನಕಾರಾತ್ಮಕ ಆಲೋಚನೆಗಳನ್ನು ತಿರಸ್ಕರಿಸಲು ಯಾವುದಾದರೂ ತಂತ್ರವಿದೆಯೇ?**

ಉ: ನಕಾರಾತ್ಮಕ ಆಲೋಚನೆಗಳನ್ನು ತಿರಸ್ಕರಿಸಲು ಯಾವ ತಂತ್ರಗಳೂ ಇಲ್ಲ. ನಮ್ಮಲ್ಲಿ ನಕಾರಾತ್ಮಕ ಆಲೋಚನೆಗಳನ್ನು ಹೊಂದದಿರುವ ಉದ್ದೇಶ ಇರಬೇಕು. ಈ ಸರಳ ಉದ್ದೇಶ ಸಾಕು.

**ಪ್ರ: ಧ್ಯಾನ ಮತ್ತು ಚಿಂತನೆಗಳ ನಡುವಿನ ಭೇದವೇನು?**

ಉ: ನಾವು ಚಿಂತನೆ ಮಾಡುವಾಗ ಬುದ್ಧಿಯನ್ನು ಉಪಯೋಗಿಸುತ್ತೇವೆ. ನಾವು ಧ್ಯಾನ ಮಾಡುವಾಗ ಬುದ್ಧಿಯನ್ನು ಮೌನಗೊಳಿಸುತ್ತೇವೆ. ಚಿಂತನೆಯಲ್ಲಿ ನಾವು ತರ್ಕವಾದ ಮುಂತಾದವುಗಳನ್ನು ಉಪಯೋಗಿಸುತ್ತೇವೆ. ಧ್ಯಾನದಲ್ಲಿ ನಾವು ಈ ಎಲ್ಲ ವಿಷಯಗಳನ್ನೂ ದಾಟಿ ದೈವತ್ವವನ್ನು ಅನುಭವಿಸುತ್ತೇವೆ. ಚಿಂತನೆಯಲ್ಲಿ ನಾವು ಭಾಗಶಃ ಸತ್ಯವನ್ನು ಗ್ರಹಿಸುತ್ತೇವೆ. ಆದರೆ ಧ್ಯಾನದಲ್ಲಿ ನಾವು ಪೂರ್ತಿ ಸತ್ಯವನ್ನು ಗ್ರಹಿಸುತ್ತೇವೆ. ಚಿಂತನೆಯಲ್ಲಿ ನಮ್ಮ ಅಹಂ ಕ್ರಿಯಾಶೀಲವಾಗುವ ಸಂಭವವಿದೆ, ನಾವು ಸ್ವಲ್ಪ ಗರ್ವಿಗಳೂ ಆಗುತ್ತೇವೆ. ಆದರೆ ಧ್ಯಾನದಲ್ಲಿ ವಿನಯವಿರುತ್ತದೆ ಮತ್ತು ಅಹಂ ಇರುವುದಿಲ್ಲ.

**ಪ್ರ: ಬದುಕಿನಲ್ಲಿ ಅನಿಶ್ಚಿತತೆ ಒಂದು ವರವೇ ಅಥವಾ ಶಾಪವೇ?**

ಉ: ಅದು ನೀವು ತೆಗೆದುಕೊಳ್ಳುವುದರ ಮೇಲೆ ಹೊಂದಿದೆ. ಅನಿಶ್ಚಿತತೆ ಒಂದು ವರ. ನಿಶ್ಚಿತತೆ ಇಲ್ಲದಾಗ ನಮ್ಮ ಸಂಪೂರ್ಣ ವ್ಯಕ್ತಿತ್ವ ಮತ್ತು ನಮ್ಮ ಎಲ್ಲಾ ಸಹಜಶಕ್ತಿಗಳು ಪರಿಸ್ಥಿತಿಯನ್ನು ಎದುರಿಸಲು ಸಿದ್ಧವಾಗುತ್ತವೆ. ಅನಿಶ್ಚತತೆ ಇದ್ದಾಗ ಮಾತ್ರ ನಾವು ಸಕ್ರಿಯರಾಗಿ, ಚುರುಕಾಗಿ ಮತ್ತು ಸಾಹಸಿಗಳಾಗಿ ಇರುತ್ತೇವೆ. ಅನಿಶ್ಚಿತತೆ ಇದ್ದಾಗ ಮಾತ್ರ ನಾವು ಆಧ್ಯಾತ್ಮದ ಕಡೆಗೆ ಮತ್ತು ದೇವರ ಕಡೆಗೆ ಒಲವು ತೋರುತ್ತೇವೆ. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| 2012 - End or Beginning | 100/- |
| Preparing for 2012 | 100/- |
| iGuruji - Vol 1 | 150/- |
| iGuruji - Vol 2 | 120/- |
| iGuruji - Vol 3 | 150/- |
| iGuruji - Vol 4 | 150/- |
| Higher Communication & Other Realities | 100/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol-2 | 150/- |
| Guruji Speaks Part - I | 200/- |
| Guruji Speaks Part - II | 200/- |
| Guruji Speaks Vol - 3 | 150/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| आय्गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. Posted at Bangalore GPO No. of Pages-8



ಗುರೂಜಿ ಕೃಷ್ಣಾನಂದ (1939)

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಶನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಆಧ್ಯಾತ್ಮಿಕ ಅನುಭವಗಳು

(ಸಂಗ್ರಹ: ಶೋಭಾ ಕೆ. ರಾವ್; ಅನು: ಸ್ವರ್ಣಲತ)

ಡಿಸೆಂಬರ್ 28ರಂದು ಮಹರ್ಷಿ ವಿಶ್ವಾಮಿತ್ರರು ನನ್ನನ್ನು ಒಂದು ಸುರಂಗದ ಮೂಲಕ, ಅಸ್ತಿತ್ವಕ್ಕೆ ಬರಲು ಕಾಯುತ್ತಿರುವ ಒಂದು ಹೊಸ ಗ್ಯಾಲಕ್ಸಿಗೆ ಕರೆದುಕೊಂಡು ಹೋದರು. ಅವರು ನನಗೆ ರಾ–ಧ್ಯಾನಮಂದಿರದ ಕೆಳಗಿರುವ ಒಂದು ಬೃಹತ್ತಾದ ಗುಲಾಬಿ ಬಣ್ಣದ ಕಮಲದಿಂದ, ಕುಂಡಲಿನಿ ಗೋಪುರದಿಂದ ಹಾಗೂ ಸಪ್ತಋಷಿಗಳ ಗುಹೆಯಿಂದ ವಿಶೇಷವಾದ ಚೈತನ್ಯಗಳನ್ನು ಪಡೆದುಕೊಳ್ಳಲು ತಿಳಿಸಿದರು. ನಂತರ ಮಹರ್ಷಿ ಅಮರರು, "ಈ ಎಲ್ಲಾ ಚೈತನ್ಯಗಳು ನಿನ್ನಲ್ಲಿ ಸ್ವಲ್ಪ ಸಮಯದವರೆಗೆ ಇರುತ್ತವೆ. ಅವು ಕ್ರಿಯಾಶೀಲವಾದಾಗ ನಿನ್ನೊಂದಿಗೆ ಮಾತನಾಡುತ್ತವೆ" ಎಂದು ತಿಳಿಸಿದರು.

– ವಿದ್ಯಾ ಅರೋರಾ

ಜನವರಿ 23ರಂದು ಬೆಳಕಿನ ಸಾಗರವನ್ನು ಅನುಭವಿಸಲು ಆರಂಭಿಸಿದ ಕೆಲವೇ ಕ್ಷಣದಲ್ಲಿ ಯಾವುದೋ ಒಂದು ಬಲವಾದ ಶಕ್ತಿ ನನ್ನನ್ನು ಆವರಿಸಿತು. ನಾನು ನನ್ನ ಸುತ್ತಲೂ 360° ಕೋನದಲ್ಲಿ ನೋಡಬಲ್ಲವಳಾಗಿದ್ದೆ. ಅಲ್ಲಿನ ವೈಶಾಲ್ಯತೆಯ ಅರಿವಿನಿಂದಾಗಿ ಅತ್ಯಂತ ಆನಂದಿತಳಾಗಿದ್ದೆ. ಅಲ್ಲಿಂದ ಹೊರಬಂದ ನಂತರವೂ ನಾನು ಸಂಪೂರ್ಣವಾಗಿ ನಿಶ್ಚಲಳಾಗಿ, ಪರಿಪೂರ್ಣಳಾಗಿ, ಪ್ರಶಾಂತತೆಯಿಂದಿದ್ದೆ. ನನ್ನಲ್ಲಿ ಯೋಚನೆಗಳು ಬಂದು ಹೋಗುತ್ತಿದ್ದರೂ ಅವು ಆ ಶಕ್ತಿ ಮತ್ತು ವೈಶಾಲ್ಯತೆಯ ಮುಂದೆ ಬಹಳ ದುರ್ಬಲವಾಗಿದ್ದವು. ಈ ಅನುಭವ ಆಗುತ್ತಿದ್ದ ಸಂದರ್ಭದಲ್ಲಿ ನಾನು ಆಶ್ಚರ್ಯಕರ ರೀತಿಯಲ್ಲಿ ಪೂರ್ಣವಾಗಿ ಎಚ್ಚರಳಾಗಿದ್ದೆ.

– ವಿದ್ಯಾ ವಿಶ್ವಾಮಿತ್ರ

ಧ್ಯಾನಾಭ್ಯಾಸದ ಮೊದಲು ತಮ್ಮ ಸಲಹೆಯಂತೆ ದೀಕ್ಷಾ ಕೊಠಡಿಗೆ ಸಂಪರ್ಕ ಕಲ್ಪಿಸಿಕೊಂಡಾಗ, ನನಗೆ ಒಂದು ಕೋಣೆಯಲ್ಲಿ ಬಂಧಿತಳಾದ ಅನುಭವವಾಗಿ ಬಹಳ ಭಯವಾಯಿತು. ಆಗ ಹಿರಿಯ ಮಾರ್ಗದರ್ಶಕರು ತಿಳಿಸಿದಂತೆ ನನ್ನ ಈ ಭಯವನ್ನು ಭಗವಂತನಿಗೆ ಅರ್ಪಿಸಿದಾಕ್ಷಣ ನನ್ನ ಸುತ್ತ ಗಾಜಿನ ಗೋಡೆಗಳು ಇದ್ದಂತೆ ಕಂಡುಬಂದವು. ನನಗೆ ಅದರ ಮೂಲಕ ಹೊರಗಿನ ದೃಶ್ಯ ಕಾಣಿಸುತ್ತಿತ್ತು. ತಕ್ಷಣ ನನ್ನ ಆ ಭಯ ದೂರವಾಗಿ ಧ್ಯಾನ ಮಾಡಲು ಸಾಧ್ಯವಾಯಿತು.

– ವಿಜಯ ಕುಮಾರಿ

ಕ್ರಿಸ್‌ಮಸ್‌ನಂದು ನಾನು ಧ್ಯಾನದ ಕೊಠಡಿಯನ್ನು ಪ್ರವೇಶಿಸಿದಾಗ ಸುಂದರವಾದ ಸುವಾಸನೆಯ ಅನುಭವವಾಯಿತು. ನಂತರ ಯೇಸುಕ್ರಿಸ್ತರನ್ನು ನಾನು ಒಂದು ಬೃಹತ್ತಾದ ನೀಲಿ ಬೆಳಕಿನ ಸಾಗರವಾಗಿ ಅನುಭವಿಸಿದೆ ಮತ್ತು ನನ್ನನ್ನೊಳಗೊಂಡ ಇಡೀ ಭೂಮಂಡಲ ಅವರ ಹೃದಯ ಭಾಗದಲ್ಲಿ ಒಂದು ಚಿಕ್ಕ ಚುಕ್ಕೆಯಂತೆ ವಿಲೀನವಾದಂತೆ ಕಂಡಿತು. ಪ್ರೀತಿ ಮತ್ತು ಬೆಳಕನ್ನು ಅನುಭವಿಸುತ್ತಿದ್ದಾಗ ಒಂದು ಬಿಳಿ ಬೆಳಕು ನನ್ನೆಡೆಗೆ ಬಂತು. ಈ ಅನುಭವದಿಂದ ಯೇಸುಕ್ರಿಸ್ತರೇ ಆ ಬೆಳಕು ಮತ್ತು ಆ ಬೆಳಕೇ ಭಗವಂತನೆಂಬ ಅರಿವಾಯಿತು.

– ಮಣಿಕಂದನ್

ಧ್ಯಾನದಲ್ಲಿ ಕ್ಷಣಕಾಲ ನನ್ನನ್ನು ನಾನು ಸಮರ್ಪಿಸಿಕೊಂಡೆ ಮತ್ತು ಆ ಧ್ಯಾನವನ್ನು ನಾನು ಆನಂದಿಸಿದೆ. ಆಗ ನಾನು ನನ್ನ ಅಂತರಾಳವನ್ನು ಪ್ರವೇಶಿಸಿ, ಗುರೂಜಿಯವರು ಆಗಾಗ್ಗೆ ಹೇಳುವ ಶೂನ್ಯತೆಯನ್ನು ಅನುಭವಿಸಿದೆ. ಒಂದು ಚೈತನ್ಯವು ಸ್ಫೋಟಗೊಂಡು ಎಲ್ಲ ಕಡೆಯಿಂದಲೂ ನನ್ನನ್ನು ಪ್ರವೇಶಿಸಿದಂತೆ ಅನಿಸಿತು. ಆಗ ನಾನು ನನ್ನ ಅಂತರಾಳಕ್ಕೆ ಮತ್ತಷ್ಟೂ ಇಳಿದು, ವಿಸ್ತರಿಸಿದೆ.

– ನೇಹಾ ರಾಜ್ವಾಲ

ಜನವರಿ 21ರಂದು ಧ್ಯಾನದ ಸಮಯದಲ್ಲಿ ನಾನು ವ್ಯಾಸ ಮಹರ್ಷಿಗಳನ್ನು ಸಂಪರ್ಕಿಸಲು ಪ್ರಯತ್ನಿಸುತ್ತಿದ್ದಾಗ ನನ್ನ ಆತ್ಮ ದೇಹದಿಂದ ಹೊರಬಂದಿತು. ಆಗ ಮತ್ತೊಂದು ಆತ್ಮವು ಸದಾ ಜೊತೆಯಲ್ಲಿದ್ದು ನನ್ನನ್ನು ಆಕಾಶದೆಡೆಗೆ ಕರೆದುಕೊಂಡು ಹೋಯಿತು. ನನಗೆ ನನ್ನ ಆತ್ಮವು ಒಂದು ನಕ್ಷತ್ರದಂತೆ ಆಕಾಶದಲ್ಲಿ ಕಾಣಿಸಿತು. ನನ್ನ ಹೃದಯದ ಬಡಿತ ಸ್ಪಷ್ಟವಾಗಿ ಕೇಳಿಸುತ್ತಿತ್ತು. ನಂತರ ವೇಗವಾಗಿ ನನ್ನ ಆತ್ಮವು ಹಿಂತಿರುಗಿ ನನ್ನ ದೇಹವನ್ನು ಸೇರಿತು. ಈ ಅನುಭವದ ನಂತರ ನಾನು ಅತ್ಯಂತ ಹರ್ಷಿತಳಾಗಿದ್ದೇನೆ.

– ಚಾರುಶೀಲಾ ಬಿರಾಜ್‌ದಾರ್

ಪ್ರತಿಯೊಂದು ಲೈಟ್ ಚಾನಲಿಂಗ್ ಸೆಶನ್ ನಂತರ ಕಾರಣವಿಲ್ಲದೆಯೇ ನನ್ನ ಅಂತರಾಳದಲ್ಲಿ ಸಂತೋಷದ ಸ್ಫೋಟವಾಗುತ್ತದೆ. ಅದು ಮಕ್ಕಳು ಲೈಟ್ ಚಾನಲ್ ಮಾಡಿದುದರ ಫಲವೆಂದು ನಂತರ ನನಗೆ ಅರಿವಾಯಿತು.

– ಪ್ರಗತಿ ರಾಜ್

ಕೆಲವು ದಿನಗಳ ಹಿಂದೆ ನನ್ನ ಜೀವನದಲ್ಲಾದ ಕಹಿ ಅನುಭವಗಳಿಂದ ನಾನು ಕುಸಿದು ಹೋಗಿದ್ದೆ. ನಾನು ಅದರಿಂದ ಹೊರಬರಲು ಧ್ಯಾನ ಮಾಡಲು ಪ್ರಾರಂಭಿಸಿದಾಗ, ಒಂದು ಪ್ರಕಾಶಮಾನವಾದ ಬೆಳಕು ನನ್ನನ್ನು ಪ್ರವೇಶಿಸಿತು. ಆ ಬೆಳಕಿಗೆ ನನ್ನ ಸಂಕಷ್ಟವನ್ನು ತಿಳಿಸಿ ನನ್ನನ್ನು ಅದರಿಂದ ಹೊರತರುವಂತೆ ವಿನಂತಿಸಿದೆ. ನಾನೀಗ ಅತ್ಯಂತ ಸಕಾರಾತ್ಮಕವಾಗಿ ಕಾರ್ಯಪ್ರವೃತ್ತನಾಗಿದ್ದೇನೆ ಮತ್ತು ಮಾನಸಿಕವಾಗಿ ದೃಢವಾಗಿದ್ದೇನೆ. ಈಗ ನಾನು ಬಹಳ ಸಂತೋಷದಿಂದಿದ್ದೇನೆ. ಗುರೂಜಿಯವರಿಗೆ ನನ್ನ ಅನಂತಾನಂತ ವಂದನೆಗಳು.

– ಸಂದೀಪ್ ಪಾಲ್ವೆ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ